5-00 P.M.

The Mysore Sales Tax (Second Amendment) Bill, 1969.

Sri M. RAJASEKHARA MURTHY (Minister for Industries, Information and Publicity).—Sir, I beg to move.....

† Sri H. N. NANJE GOWDA.—Sir, I rise to a Point of Order. Now, the Government intends to beg leave of the House for consideration of the Mysore Sales Tax (Second Amendment) Bill, 1969, according to the agenda. My objection is there. I draw your kind attention to Rule 85 (Third Edition) of the Rules of Procedure and Conduct of Business in Lok Sabha.

Mr. SPEAKER.—Are they relevant here ?

Sri H. N. NANJE GOWDA.—Yes, Sir. I may bring to your notice that when the Mysore Land Revenue (Second Amendment) Bill was discussed, although I took objection, the discussion went on, and finally it was decided that without the first amendment being passed the second amendment cannot be introduced to the same Act. Now, there are three amendments before us. The Government have intended to amend the Mysore Sales Tax Act (Mysore Act 25 of 1957), for the third time. According to the Bills that have been introduced before this House and which I am in possession of, they want to amend two different Acts. It almost becomes the first amendment to the Mysore Sales Tax Act, 1957. The Mysore Sales Tax (Amendment) Bill was also introduced in the Budget session. According to the Government, this is the first amending Bill to the Mysore Sales Tax Bill, 1957. But, according to me this is the second amending Bill. The 2nd amending Bill of the Government, is the third amending Bill according to me. I may draw your attention to page 393 of "Practice and Procedure of Indian Parliament" by S. S. More, which says :

> "A Bill, which is dependent wholly or partly upon another Bill pending before the House, may be introduced in the House in anticipation of the passing of the Bill on which it is dependent. But the second Bill should be taken up for consideration and passing in the House only after the first Bill has been passed by the House and assented to by the President."

They were guided by some rulings that without considering the first amendment before the House the Government cannot bring a motion for the amendment of the second Bill for the same Act. I request you to uphold my objection and direct the Government to bring the first amendment before the House for consideration and then to think of the second amending Bill for consideration.

Sri M. RAJASEKHARA MURTHY.—Sir, the rule does not prohibit taking up this Bill. The other Bill has already been passed. It is not going to infringe the rules if this Bill is taken up later.

Sri C. K. RAJAIAH SHETTY.—Is there any meaning in taking up the second thing first and the first thing afterwards ? Should it not have any sanctity ?

Mr. SPEAKER.—Is the first amending Bill introduced ?

Sri H. N. NANJE GOWDA.—Yes, Sir.

Mr. SPEAKER.—Has it been passed ?

Sri H. N. NANJE GOWDA.—No, Sir.

Sri K. H. SRINIVASA (Sagar).—If we take up a particular amending Bill and we are at the stage of passing, we can call it a first amendment; there is no harm. Ws did likewise in the case of the Land Revenue Amendment Bill also. I don't think the technical objection raised in any way prevents this House in considering this amending Bill.

Sri H. N. NANJE GOWDA.—Sir, my friend drew the attention of the House to the Mysore Land Revenue (Amendment) Bill. The House permitted to amend it on the apprehension that the objection was not raised at the beginning. Now, in this case, I am taking the objection before leave is being granted for the consideration of the Bill. If they begin to commit the mistakes one after the other, I don't think we will be having a good procedure; others will not appreciate the stand taken by this House.

Mr. SPEAKER.—Hon. Member Sri H. N. Nanje Gowda has raised a very important point. He said, if there is a precedent and if it is a wrong precedent, it should not be followed. I am perfectly in agreement with that view. But, the point is, what is the principle involved ? Supposing some Bills are to be introduced and they are named 1, 2, 3 and so on. Naming does not give priority to the Bill. It is not the numbering of the Bill that is important, but which Bill is considered first. If the Bill which bears a later number comes up it becomes number one. The number should not come in the way of consideration of the Bill. I am sorry I cannot accept the Point of Order raised.

Sri H. N. NANJE GOWDA.—Though I may agree with your Ruling, I would like to bring one other decision of the Court for your consideration, wherein they have stated that a Bill which is dependent wholly or partly upon another Bill in the House may be introduced in anticipation of the passing of the Bill on which it is dependent. But the second should be taken up only after the first Bill has been passed by the House and assented to by the President.

If a common purpose is concentrated in two Bills, *i.e.*, one is dependent on the other, such two Bills if they are introduced in the House, the first has to be taken into consideration first and the second Bill has to be taken up only after the passing of the first Bill. Each one of the three Bills is dependent on the other. In one Bill they have raised the levy of taxation ; the other Bill relates to collection of taxation ; and the last Bill relates to summary trial to punish the defaulters.

(SRI H. N. NANJE GOWDA)

I will read the relevant rule in the Rules of Procedure and Conduct of Business in Lok Sabha. Rule 66 says:

> "A Bill, which is dependent wholly or partly upon another Bill pending before the House, may be introduced in the House, in anticipation of the passing of the Bill on which it is dependent:
>
> Provided that the second Bill shall be taken up for consideration and passing in the House only after the first Bill has been passed by the Houses and assented to by the President."

So, the second Bill which is now brought up by the Hon. Minister must be taken up for consideration in the House only after the first Bill has been passed by the House and assented to by the President. I think we have to be guided by that Rule. I request you not to be in a hurry. I request you to bestow consideration on this point. I feel I am right in raising this objection and I therefore request you to direct the Government to withhold the Bill.

Mr. SPEAKER.—I want some clarifications from the hon. member. Should not one Bill be dependent upon another? For instance, in the second Bill which the Hon. Minister is trying, to move, clause 2 seeks to enhance the incidence of tax; clause 3 deals with validation of levy of collection of tax. So the second Bill is altogether for a different purpose. I do not think one is dependent on the another.

Sri H. N. NANJE GOWDA.—In one Bill, the tax is raised from 6½ per cent to 45 per cent; in another Bill, summary disposal of cases in default of payment of tax is dealt with. One can pay 6½ per cent easily. But if one has to pay 45 per cent, he will definitely become defaulter. I am convinced that one Bill is dependent on the other.

Sri L. SRIKANTIAH.—The very same point was raised. Hon. Sri Nanje Gowda's point of view is not very relevant with regard to the three Bills that are before us. He says that the provisions of one particular Bill are dependent upon the provisions of another particular Bill. Here the raising of tax in one Bill has no bearing on the establishment of a check post or the adopting the procedure of summary trial in another Bill. These three things are quite independent and they are not dependent on each other. Therefore there is no necessity to take up the first Bill first and then consider this Bill.

Sri H. N. NANJE GOWDA.—Then you can do this thing, Sir. You can order the removal of the Bills that are in the Register of the Legislature Secretariat. The reason for this is that unless the first and Second Bills are removed, we cannot consider the next Bill. If these two Bills are removed, this Bill will automatically become the first Bill. The wrong procedure cannot be a precedent.

Sri L. SRIKANTIAH.—There is no harm in the nomenclature. Three Bills are different. Of course the tax is enhanced in some other. Bill. This is the argument put forward by the Hon. Member. But this will not be a substantive proof for removing the Bills. If the hon. Member substantiates with facts and figures that they are inter-dependent, it would be all right. But the arguments advanced by the member are not tenable in law.

Sri C. K. RAJAIAH SHETTY.—In the first Bill tax of 6½ per cent is levied for the goods. The tax has been enhanced to 45 per cent in the second Bill. Therefore there is inter-link between these two Bills. Nobody should carry the articles specified without paying the duty at the check post. If anybody does so, he has to pay the penalty. Therefore, there is inter-dependability between the two Bills. Therefore, the first Bill should be taken up first and the second Bill next for consideration.

Mr. SPEAKER.—I have heard the hon. Members. I am inclined to accept the views put forward by the hon. Member Sri L. Srikanthiah. All the Bills are separate in their scope and one has nothing to do with the other. There is no substance in the argument put forward by Sri Nanje Gowda. Sri Rajaiah Setty said that the incidence of tax is raised from lower level to higher level and therefore the first Bill should be taken first and then the second Bill as they are inter linked. As there is no substance in it I cannot accept the point of order. They are separate Bills.. Therefore, I regret there is no force in the point of order.

Now, I call upon hon. Member Sri M. Nagappa to move his statutory resolution. Sri Nagappa is not here, and therefore it cannot be moved. Now the Minister in-charge of the Bill may move his consideration motion.

Sri M. RAJASEKHARA MURTHY.—I beg to move :

"That the Mysore Sales Tax (Second Amendment) Bill, 1969 be taken into consideration."

Mr. SPEAKER.—The motion moved :

"That the Mysore Sales Tax (Second Amendment) Bill, 1969, be taken into consideration.

There is an amendment by Sri P. V. Aithal. He is not here.

Sri K. H. PATIL.—For the reasons best known to me, this Bill has not been validly moved because there is a statutory resolution disapproving the Mysore Ordinance No. 3. Therefore it is not validly moved.

Mr. SPEAKER—Unfortunately the mover of the Resolution is not here. Therefore, whatever can be said in support of the Ordinance can be said in the course of the debate on the Bill. Even Sri P. V. Aithala who has given notice of the Resolution is not here. It is not possible to postpone the considration of the Bill. Members can speak against the Bill if they want.

Sri K. H. PATIL.—By curtailing the rights of the Hon. members, you are favouring the Government.

Mr. SPEAKER.—Hon. member should not pass such uncharitable remarks.

Sri K. H. PATIL.—We cannot understand the speed with which we are going, we are not given an opportunity to move our amendments.

Mr. SPEAKER.—Who prevented Mr. Aithal from moving his amendment ? He has given notice of it. It was admitted, but he is not here. The House cannot stop functioning because an Hon. Member prefers to be absent. Therefore, members need not be uncharitable in their remarks. It is not proper.

5-30 P.M.

† ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಈ ಮೈನೂರು ಸೇಲ್ಸ್ ಟ್ಯಾಕ್ಸ್ (2ನೇ ಅಮೆಂಡ್‌ಮೆಂಟ್) ಮಸೂದೆಯನ್ನು ಇಲ್ಲಿ ತಂದಿದ್ದಾರೆ. ಇದನ್ನು ನೋಡಿದರೆ, ನಾನು ಕೆಲವು ಕಠಿಣವಾದ ಮಾತುಗಳನ್ನು ಹೇಳಲೇಬೇಕಾಗಿದೆ, ಅದಕ್ಕೆ ನನ್ನನ್ನು ಕ್ಷಮಿಸಬೇಕು. ನಾವು ಇಲ್ಲಿ ಯಾವ ಒಂದು ಮಸೂದೆಯನ್ನು ತಂದರೆ, ಅದನ್ನು ನಾವು ಒಪ್ಪದಿದ್ದರೂ ಕೂಡ ಅದು ಮಸೂದೆಯಾಗುತ್ತದೆ. ಅದೊಂದು ಮಹತ್ವದ ನಿರ್ಣಯವಾಗುತ್ತದೆ. ಇಲ್ಲಿ ಏನಾಗಿದೆ ಎಂದರೆ, ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದಾರೇನೆಂದರೆ, ಕೋರ್ಟ್‌ನಲ್ಲಿ ಸರ್ಕಾರ ವಸೂಲಾತಿ ಮಾಡಿದ್ದು ಸರಿಯಲ್ಲವೆಂದು ತೀರ್ಪಾನ ಕೊಟ್ಟದ್ದರಿಂದ ಇವರು ಅದನ್ನು ಸರಿಪಡಿಸುವುದಕ್ಕೋಸ್ಕರ, ಈ ಒಂದು ತಿದ್ದುಪಡಿಯನ್ನು ತಂದದ್ದು ಎಂದು. ಇವರು ಆಗಿಂದಾಗ್ಗೆ ಇದನ್ನು ತರುತಾ ಇದ್ದಾರೆ. ಇದು ಅಷ್ಟು ಲಘುವಾಗಿ ಭಾವಿಸತಕ್ಕ ಪ್ರಶ್ನೆಯಲ್ಲ. ಈಗ ಇವರು ಮಾಡಿದಂತಹ ತಪ್ಪನ್ನು ಸರಿಪಡಿಸಿಕೊಳ್ಳುವುದಕ್ಕೋಸ್ಕರ ಇದನ್ನು ತರುತ್ತಿದ್ದಾರೆ. ಮಾನ್ಯ ಸದಸ್ಯರಾಗಿರತಕ್ಕ ನಾವುಗಳು, ಇವರು ಏನಾದರೂ ಸರಿಯಾದ, ಯಾವ ಒಂದು ಬಿಲ್ಲನ್ನೂ ತಂದರೆ, ಒಪ್ಪಿಗೆ ಕೊಡತಕ್ಕದ್ದು ಪದ್ಧತಿ. ಈ ಪ್ರಜಾನತಾತ್ಮಕವಾದ ರೀತಿಯಲ್ಲಿ ಅದು ಬರಬೇಕು. ಇವತ್ತು ಸರ್ಕಾರದವರು ಯಾವುದೇ ಬಿಲ್ ತಂದರೂ ಕೂಡ, ಮೆಜಾರಿಟಿ ಇರುವುದರಿಂದ, ತಮಗೆ ಬಹುಮತ ಇರುವುದರಿಂದ ಯಾವುದನ್ನೂ ಪಾಸು ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಈ ಬಿಲ್ಲುಗಳನ್ನು ಡ್ರಾಫ್ಟ್ ಮಾಡತಕ್ಕದು, ಬಹಳ ಆತುರಾತುರವಾಗಿ ಮಾಡಿ, ಕಾನೂನಿನ ಪರಿಮಿತಿಯೊಳಗೆ ಮಾಡದೆ, ಅದು ಮುಂದೆ ನ್ಯಾಯಾಲಯಕ್ಕೆ ಹೋಗಿ, ಅಲ್ಲಿ ನಾವು ತರೆ ತಗ್ಗಿಸಬೇಕಾದ ಪ್ರಸಂಗಗಳು ಬಂದಿವೆ. ಇವರು 6½ ಪರ್‌ಸೆಂಟ್ ಇದ್ದುದನ್ನು 45 ಪರ್‌ಸೆಂಟ್ ಮಾಡಿದ್ದಾರೆ. ಹಿಂದೆ ಮಾಡಿದ್ದನ್ನು ಸರಿಪಡಿಸಬೇಕೆಂದು ಇಲ್ಲಿ ಹೇಳುತ್ತಿದ್ದಾರೆ. ಇದರ ಮೂಲ ಮಸೂದೆಯನ್ನು ತರತಕ್ಕ ಕಾಲದಲ್ಲಿ ಸರ್ಕಾರದಲ್ಲಿರತಕ್ಕ ಲಾ ಸೆಕ್ರಟರಿಯೇಟ್ ಡೆಲಿಜೆಂಟ್ ಆಗಿದ್ದರೆ ಇಂಥ ದುಷ್ಟ ಪರಿಣಾಮವಾಗುತ್ತಿರಲಿಲ್ಲ. ಇವತ್ತು ಕೋರ್ಟು ಕಚೇರಿಗಳಿಗೆ ಹೋಗಿ ಮತ್ತು ಈ ಸಭೆಯನ್ನು ಅದಕ್ಕೋಸ್ಕರ ಕರೆದು, ದುಬಾರಿಯಾಗಿ ಹಣವನ್ನು ಖರ್ಚು ಮಾಡಬೇಕಾದ ಪ್ರಮೇಯ ಇರುತ್ತಿರಲಿಲ್ಲ. ಇವರ ಲಾ ಡಿಪಾರ್ಟ್‌ಮೆಂಟನ್ನು ಹದ್ದುಬಸ್ತಿನಲ್ಲಿ ಇಡದೆ, ಇಲ್ಲಿ ರೋಪದೋಪಗಳಿಂದ ಕೂಡಿದ ಮಸೂದೆಯನ್ನು ತಂದು ಪಾಸು ಮಾಡಿ, ಅದು ನ್ಯಾಯಾಲಯಕ್ಕೆ ಹೋಗಿ, ಅಲ್ಲಿ ಅವರ ಅಭಿಪ್ರಾಯ ಕೊಡತಕ್ಕ ಕಾಲದಲ್ಲಿ ಈ ಸಭೆಯ ಘನತೆ ಗೌರವಗಳಿಗೆ ಕಳಂಕವಾಗುವುದಲ್ಲದೆ ಮತ್ತೇನು ? ಇದರಿಂದ ನಾವು ನಾಚಿಕೆಯಿಂದ ಅವಮಾರ್ಯಾದೆಯಿಂದ, ಒಂದು ಅವಹೇಳನಕ್ಕೆ ಗುರಿಯಾಗಬೇಕಾಗಿದೆ ಎಂದು ನಾನು ಬಹಳ ವಿಷಾದದಿಂದ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಆರುವರೆ ಇದ್ದುದನ್ನು 45 ಪರ್‌ಸೆಂಟ್ ಮಾಡುತ್ತಾರೆ, ಅದು ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಸಭೆಯ ಕಾರ್ಯಕರಾಪಗಳನ್ನು ಇವತ್ತು ನಡೆಸಬೇಕಾದರೆ ಅದಕ್ಕೂ ಸರ್ಕಾರದ ಹಣ ಖರ್ಚು ಮಾಡಬೇಕಾಗುತ್ತದೆ. ಸರ್ಕಾರದವರು ಇವತ್ತು ಆತುರಾತುರವಾಗಿ ತರತಕ್ಕ ಕಾನೂನುಗಳನ್ನು ನ್ಯಾಯಾಲಯವು ರದ್ದುಪಡಿಸುವುದು, ಅದು ನಮಗೆ ಛೀಮಾರಿ ಹಾಕುವುದು, ನಂತರ ಇವರು ಸೆರಗನ್ನು ತಲೆಯ ಮೇಲೆ ಹಾಕಿಕೊಂಡು ಇಲ್ಲಿ ಬಂದು, ನಮಗೆ ಅವಮಾನವಾಯಿತು, ನ್ಯಾಯಾಲಯ ಛೀಮಾರಿ ಹಾಕಿದ್ದಾರೆ, ಅದನ್ನು ಸರಿಪಡಿಸಿಕೊಡಿರಿ, ನೀವು ವ್ಯಾಲಿಡೇಟ್ ಮಾಡಿ ಎಂದು, ಇಂಥ ಮಸೂದೆಯನ್ನು ತರತಕ್ಕದ್ದು ಇದು ಕೊನೆಗೊಳ್ಳಬೇಕು. ಇಂಥ

ಪ್ರಜಾಪ್ರಭುತ್ವದಲ್ಲಿ ದೇಶದ ಸರ್ವಸ್ವವನ್ನೂ ಅರ್ಥ ಮಾಡಿಕೊಂಡ, ಈ ಉಚ್ಚ ಸಭೆಯಲ್ಲಿ, ಮಾಡಿದಂತಹ ಕಾನೂನುಗಳು, ಕಾನ್‌ಸ್ಟಿಟ್ಯೂಷನಿಗೆ ವಿರುದ್ಧವಾಗಿ ಹೋಗುವುದಿಲ್ಲವೆಂಬ ಅರ್ಥ ಇದೆ. ಸಭೆಯು ಸರ್ವ ಸದಸ್ಯರೂ ಕಾನ್‌ಸ್ಟಿಟ್ಯೂಶನ್ ಒಳಗೇನೇ ಕೆಲಸ ಮಾಡುತ್ತಾರೆ, ಅಲ್ಟ್ರಾವೈರ್ ಆಗಿ ಕೆಲಸ ಮಾಡುವುದಿಲ್ಲವೆಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡಿದ್ದಾರೆ. ಆದರೆ ಇವತ್ತು ಆಗತಕ್ಕ ರೀತಿಯಲ್ಲಿ ತಮಗೆ ಬಹುಮತ ಇದೆ ಎಂಬ ಒಂದು ಸೊಕ್ಕಿನಿಂದ, ಪ್ರಾಮಾಣಿಕತೆಗೆ, ಆತಂಕ ಬರುವ ಹಾಗೆ ಕೋರ್ಟಿನವರು ನಮ್ಮನ್ನು ಟೀಕಿಸುವ ರೀತಿಯಲ್ಲಿ ಕಾನೂನುಗಳನ್ನು ತಂದು ಪಾಸು ಮಾಡಿಕೊಂಡು ಹೋಗುತ್ತಿದ್ದಾರೆ. It is most unfair on the part of the Government if the Government are persisting in bringing amendments; it would not bring a good name to the House. ಇನ್ನೊಂದು ವಿಚಾರ. ಈ ಅಮೆಂಡ್‌ಮೆಂಟ್ ಷೆಡ್ಯೂಲಿನಲ್ಲಿ ಏನು ಇಟ್ಟುಕೊಂಡಿದ್ದಾರೆ, ಅದು ಹಿಂದೆ ಪ್ರಯೋಗದಲ್ಲಿತ್ತೋ, ಮುಂದೆ ಇದೆಯೋ ಗೊತ್ತಿಲ್ಲ. ಇವತ್ತು ಪ್ರೊಹಿಬಿಷನ್ನನ್ನು ತೆಗೆದು ಹಾಕಿದ್ದಾರೆ. ಕೆಲವು ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲಿ ಯಾರು ಬೇಕಾದರೂ ಕುಡಿಯಬಹುದು, ನಂಜೇಗೌಡರೂ ಕುಡಿಯಬಹುದು, ರಾಮಕೃಷ್ಣ ಹೆಗ್ಗಡೆಯವರೂ ಕುಡಿಯಬಹುದು, ಇನ್ನೊಬ್ಬರೂ ಕುಡಿಯಬಹುದು. ಆದರೆ ಒಂದು ಮಾತನ್ನು ವಿಷಾದದಿಂದ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈಗ ಒರಿಜಿನರ್ ಆಕ್ಟ್ 57, ಎರಡನೇ ಷೆಡ್ಯೂಲಿನಲ್ಲಿ all liquors other than country liquors 25 per cent" ಎಂದು ಇದೆ. Biscuit brandy, favourite brandy, wine, etc., ಇವೆರ್ನಾ ರಾಮಕೃಷ್ಣ ಹೆಗಡೆಯವರ ದರ್ಜೆಯವರು ಕುಡಿಯತಕ್ಕದ್ದು. ಥ್ರೀ ಎನಸ್‌ನಲ್ಲಿ, ಹೋಟೇಲ್ ಇಂಟರ್‌ನ್ಯಾಷನರ್‌ನಲ್ಲಿ ಮಾರಾಟ ಮಾಡತಕ್ಕದ್ದು., ಇಲ್ಲಿ ಎಲ್ಲಾ ಅದನ್ನು ಮಾರಬಹುದು.

ಹೈಕೋರ್ಟಿನವರು ನೀವು ಕಾನೂನಿಗೆ ವಿರೋಧವಾಗಿ ಕೆಲಸ ಮಾಡಿದ್ದೀರಿ ಎಂದು ನಮಗೆ ಚೀಮಾರಿ ಹಾಕಿದ್ದರೂ ಕೂಡ ಮತ್ತೆ ಇದನ್ನು ಪ್ಯಾಲಿಡೇಟ್ ಮಾಡಬೇಕೆಂದು ಈಗ ಈ ಸಭೆಯ ಮುಂದೆ ತಂದಿದ್ದಾರೆ. ಹಿಂದೆ ಒಳ್ಳೆಯ ತೀರ್ಮಾನವನ್ನು ಕೈಗೊಂಡಿದ್ದಾರೆ. ಶ್ರೀಮಂತರು ಕುಡಿಯತಕ್ಕಂಥ ಬಿಸ್ಕತ್ ಬ್ರಾಂಡಿ, ಫೇವರಿಟ್ ಬ್ರಾಂಡಿ, ವೈನು, ಮುಂತಾದುವುಗಳಿಗೆ 25 ಪರ್ಸೆಂಟ್ ನುಂಕ ಬಿದ್ದರೂ ಪರವಾಯಿಲ್ಲ ಎಂದು ಹೇಳಿ ಅದನ್ನು ಹಾಕಿದ್ದರು. ಈಚಲು ಮರದಿಂದ ಇಳಿಸತಕ್ಕಂಥ ಹೆಂಡಕ್ಕೆ ಬಡಬಗ್ಗರು ಸಾಯಂಕಾಲದ ವೇಳೆಯಲ್ಲಿ ಮೈಕೈ ನೋವಿಗಾಗಿ ಅದನ್ನು ಕುಡಿಯುತ್ತಾರೆ ಎಂದು ಅದಕ್ಕೆ ಕಡಿಮೆ ನುಂಕವನ್ನು ಹಾಕಿದ್ದರು. ಎಂದರೆ 6¼ ಪರ್ಸೆಂಟ್ ಹಾಕಿದ್ದರು. ಪ್ರೊಹಿಬಿಷನ್ ತೆಗೆದ ಮೇಲೆ ಕಾರಿನಲ್ಲಿ ತಿರುಗಾಡುವವರೂ ಕೂಡ ಅದನ್ನು ಕುಡಿಯುವುದಕ್ಕೆ ಶುರು ಮಾಡಿದರು. ಈಗ ಬಡವರ ಮೇಲೆ ಹೊಟ್ಟೆಗೆ ಹಿಟ್ಟಿಲ್ಲದವರ ಮೇಲೆ ಮೈಗೆ ಬಟ್ಟೆಯಿಲ್ಲದವರ ಮೇಲೆ 45 ಪರ್ಸೆಂಟ್ ನುಂಕವನ್ನು ಹಾಕಬೇಕೆಂದು ಶುರು ಮಾಡಿದ್ದೀರಿ. ನೀವು ಮಾಡಿದಂತಹ ಅನ್ಯಾಯವನ್ನು ಏತಕ್ಕೆ ಸರಿಪಡಿಸಬೇಕು. ಪಾಪ ಬಡವರಿಗೆ ನೀವು ತೆರಿಗೆಯನ್ನು ಹಾಕಿದ್ದು ಸರಿಯಲ್ಲ ಎಂದು ಹೈಕೋರ್ಟಿನವರು ತೀರ್ಮಾನವನ್ನು ಕೊಟ್ಟರೂ ಕೂಡ ಈಚಲು ಮರದಿಂದ ತೆಗೆದಂತಹ ಹೆಂಡ ಸಾರಾಯಿಯನ್ನು ಕುಡಿಯತಕ್ಕಂಥ ಬಡವರ ಮೇಲೆ, ಹರಕಲು ಬಟ್ಟೆಯನ್ನು ಹಾಕಿಕೊಂಡಿರತಕ್ಕಂಥ, ಗುಡಿಸಲುಗಳಲ್ಲಿ ವಾಸ ಮಾಡತಕ್ಕಂಥ ಬಡ ಜನಗಳ ಮೇಲೆ 45 ಪರ್ಸೆಂಟ್ ನುಂಕವನ್ನು ಏತಕ್ಕೆ ಹಾಕಿದ್ದೀರಿ? ಈ ನುಂಕವನ್ನು ಹಾಕಿದ್ದರ ಬಗ್ಗೆ ಹೈಕೋರ್ಟಿನವರು ನಿಮಗೆ ಚೀಮಾರಿ ಹಾಕಿದ್ದರೂ ಕೂಡ ಇಂಥಾ ಕಾರ್ಯವನ್ನು ರೆಗ್ಯುಲರೈಜ್ ಮಾಡಬೇಕು ಎಂದು ಹೇಳತಕ್ಕಂಥಾದ್ದು ಅಪ್ರಕೃತ. ಶ್ರೀಮಾನ್ ರಾಜಶೇಖರ ಮೂರ್ತಿಯವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ತಿದ್ದುಪಡಿಯನ್ನು ಪೋಟಿಗೆ ಹಾಕಿ ಪಾಸು ಮಾಡಿಕೊಳ್ಳುತ್ತೀಪೆ, ರೆಗ್ಯುಲರೈಜ್ ಮಾಡಿಕೊಳ್ಳುತ್ತೀವೆ ಎಂದರೆ ಜನಸಾಮಾನ್ಯರು ಏನೆಂದಾರು ಎಂಬುದನ್ನು ಯೋಚನೆ ಮಾಡಬೇಕು. ಈಗ ನೀವು ಹೆಂಡ ಸಾರಾಯಿ ಮಾರಾಟದ ಮೇಲಿನ ತೆರಿಗೆಯನ್ನು ಶೇಕಡಾ 45ಕ್ಕೆ ಹೆಚ್ಚಿಸಿರುವುದು ಜಾಸ್ತಿ ಆಯಿತು. ಈ ರೀತಿ ನೀವು ಮಾಡುವುದಾದರೆ ಸಮಾಜ ವಾದಕ್ಕೆ ತಿಲಾಂಜಲಿಯನ್ನು ಬಿಟ್ಟಂತಾಗುತ್ತದೆ. ಆದ್ದರಿಂದ ಹೈಕೋರ್ಟಿನ ತೀರ್ಮಾನಕ್ಕೆ ನೀವು ಮನ್ನಣೆ ಕೊಡಬೇಕು. 1957ನೇ ಇಸವಿಯಲ್ಲಿ ಅಂದಿನ ವಿಧಾನ ಸಭಾ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತು ಬಡವರ ಮೇಲಿನ ಕರುಣೆಯಿಂದ ಹೆಂಡ ಸಾರಾಯಿಯ ಮಾರಾಟದ ಮೇಲೆ 6¼ ಪರ್ಸೆಂಟ್ ತೆರಿಗೆಯನ್ನು ಹಾಕಿದ್ದರು. ಹಳ್ಳಿಯ ಜನಗಳು ಬೆವರು ಸುರಿಸಿ ಕೆಲಸ ಮಾಡತಕ್ಕ ಜನಗಳು, ಗುಡಿಸಲುಗಳಲ್ಲಿ ವಾಸಮಾಡತಕ್ಕ ಜನಗಳು, ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಜನಗಳು ಸಾಯಂಕಾಲದ ವೇಳೆಯಲ್ಲಿ ತಮ್ಮ ಮೈ ಕೈ ನೋವನ್ನು ಹೋಗರವಡಿಸುವುದಕ್ಕಾಗಿ ಈಚಲು ಮರದಿಂದ ತೆಗೆಯತಕ್ಕ ಹೆಂಡ, ಸಾರಾಯನ್ನು ಕುಡಿಯುತ್ತಾರೆ ಎಂದು ಅದರ ಮಾರಾಟದ

(ಶ್ರೀ ಎಚ್. ಎನ್. ನಂಜೇಗೌಡ)

ಮೇಲೆ ಹಿಂದಿನ ಶಾಸನ ಸಭಾ ಸದಸ್ಯರು ಕಡಿಮೆ ತೆರಿಗೆಯನ್ನು ಹಾಕಿದ್ದರು. ಆದ್ದರಿಂದ ಅದನ್ನು ಈಗ ಜಾಸ್ತಿ ಮಾಡುವುದಕ್ಕೆ ಹೋಗಬೇಡಿ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಮತ್ತು ಶ್ರೀಮಾನ್ ರಾಜಶೇಖರ ಮೂರ್ತಿಯವರು ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡು ಬಡ ಜನಗಳಿಗೆ ಉಪಕಾರ ಮಾಡಿ, ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ ಎಂದು ಹೇಳಿ ನಾನು ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡುತ್ತೇನೆ.

†ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಈ ಸಭೆಯಮುಂದೆ ತಂದಿರತಕ್ಕಂಥ 1969ನೇ ಇಸವಿಯ ಮೈಸೂರು ಸೇಲ್ಸ್ ಟ್ಯಾಕ್ಸ್ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ಲನ್ನು ನೋಡಿ ನನಗೆ ಸಖೇದಾಶ್ಚರ್ಯವಾಗಿದೆ. ಸರ್ಕಾರ ಈ ಮಟ್ಟಕ್ಕೆ ಬಂದಿತೇ ಎಂದು ನಾವು ವ್ಯಥೆಪಡಬೇಕಾಗಿದೆ. ಸರ್ಕಾರದಲ್ಲಿ ನ್ಯಾಯ ಪಂಡಿತರಿಗೆ, ನ್ಯಾಯಪಾಂಡಿತ್ಯಕ್ಕೆ ಅಭಾವ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಯಾರಾದರೂ ಈ ತಿದ್ದುಪಡಿ ಮಸೂದೆಯನ್ನು ನೋಡಿದರೆ ಸರ್ಕಾರದಲ್ಲಿ ನ್ಯಾಯ ಪಂಡಿತರಿಗೆ, ನ್ಯಾಯಪಾಂಡಿತ್ಯಕ್ಕೆ ಅಭಾವ ಇದೆಯೋ ಏನೋ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಉಚ್ಚಮಟ್ಟದಲ್ಲಿ ವಹಿವಾಟನ್ನು ನಡೆಸತಕ್ಕಂಥ ಸರ್ಕಾರಿ ಅಧಿಕಾರಿಗಳು ಮತ್ತು ಮಾನ್ಯ ಮಂತ್ರಿ ವರ್ಯರು ಇಂಥಾ ತಪ್ಪು ಮಾಡಿ ಅದನ್ನು ತಿದ್ದಿಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ನಾವು ಸಂಕಟಪಡಬೇಕಾಗಿದೆ. 1957 ನೇ ಇಸವಿಯಲ್ಲಿ ಕಾನೂನು ಪ್ರಕಾರ ಶೇಂದಿ ಸಾರಾಯಿಗಳ ವಹಿವಾಟಿನ ಮೇಲೆ ಮೂಲ ಬೆಲೆಯಮೇಲೆ ಮಾತ್ರ ತೆರಿಗೆಯನ್ನು ವಿಧಿಸಿದ್ದರು. ಅದನ್ನು 9 ವರ್ಷಗಳಾದಮೇಲೆ ಎಂದರೆ 1966 ನೇ ಇಸವಿಯಲ್ಲಿ ಹಿಂದೆ ಕೊಟ್ಟದ್ದಂಥಾ ವಿನಾಯ್ತಿಯನ್ನು ವಜಾ ಮಾಡಿ ಓಟ್ಟು ಟರ್ನ್ ಓವರ್ ಮೇಲೆ ಎಕ್ಸೈಜ್ ಡ್ಯೂಟಿಯನ್ನು ಸೇರಿಸಿ ಅದರ ಮೇಲೆ ತೆರಿಗೆಯನ್ನು ವಿಧಿಸಿದರೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತದೆ ಎಂದು ಅದರ ಮೇಲೆ ತೆರಿಗೆಯನ್ನು ವಿಧಿಸಿದರು. ಹಿಂದೆ ಕೊಟ್ಟಂಥಾ ವಿನಾಯ್ತಿಯನ್ನು ತೆಗೆದು ಹಾಕುವುದು ಸೂಕ್ತವೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿತ್ತು. ವಿಾರಾಟ ತೆರಿಗೆಯ ಕಾನೂನು ಈ ಸಭೆಯಿಂದ ಅಂಗೀಕಾರ ಆದಮೇಲೆ ಅದನ್ನು ಮಾರ್ಪಾಟು ಮಾಡುವ ಬಗ್ಗೆ ಪ್ರಕಟಣೆಯನ್ನು ಹೊರಡಿಸುವ ಅಧಿಕಾರ ಸರ್ಕಾರಕ್ಕೆ ಎಂದು ನಾವು ಪ್ರಶ್ನೆ ಮಾಡಬೇಕಾಗಿದೆ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಎಕ್ಸ್‌ಪ್ಲನೇಷನ್ ಕೊಡಬೇಕೆಂದು ನಾನು ಹೇಳುತ್ತೇನೆ. ಮೊದಲು ಮಾಡಿದ್ದು ಸರಿಯಾಗಿತ್ತು. ಆ ನಂತರ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತದೆ ಎನ್ನುವ ಉದ್ದೇಶದಿಂದ ಶೇಂದಿ, ಸಾರಾಯಿ ವಿಾರಾಟದ ಮೇಲೆ ತೆರಿಗೆಯನ್ನು ವಿಧಿಸುವಾಗ ಓಟ್ಟು ಟರ್ನ್ ಓವರ್ ಮೇಲೆ ಎಕ್ಸೈಜ್ ಡ್ಯೂಟಿಯನ್ನು ಸೇರಿಸಿ ತೆರಿಗೆಯನ್ನು ವಿಧಿಸಿ, ಈ ಮಾನ್ಯ ಸಭೆಯವರು ಅಂಗೀಕಾರ ಮಾಡಿದ್ದಂತಹದ್ದನ್ನು ಮೀರಿ ಒಂದು ಪ್ರಕಟಣೆಯನ್ನು ಹೊರಡಿಸಿದರು. ಆಗ ಹೈಕೋರ್ಟ್‌ನವರು ಸರ್ಕಾರ ಆ ರೀತಿ ಮಾಡಿದ್ದು ತಪ್ಪು ಎಂದು ಒಂದು ತೀರ್ಮಾನವನ್ನು ಕೊಟ್ಟರು. ಆದರೂ ಸಹ ಸರ್ಕಾರದವರು ತಾವು ಮಾಡಿದಂತಹ ತಪ್ಪನ್ನು ಸಿಂಧು ಮಾಡಿಕೊಳ್ಳಬೇಕು, ರೆಗ್ಯುಲರೈಜ್ ಮಾಡಿಕೊಳ್ಳಬೇಕೆಂದು ಈಗ ನಮ್ಮ ಎದುರಿಗೆ ತಂದಿದ್ದಾರೆ. ಆದ್ದರಿಂದ ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ, ಇದನ್ನು ಸರ್ಕಾರದಲ್ಲಿ ಇರತಕ್ಕ ನ್ಯಾಯ ಪಂಡಿತರು ಒಪ್ಪಿದರೇ ಈ ಬಗ್ಗೆ ಸರ್ಕಾರದವರು ಅವರೊಡನೆ ಸಮಾಲೋಚನೆ ನಡೆಸಿದರೆ ಹೇಗೆ ಎಂದು ನಾನು ಸರ್ಕಾರದವರನ್ನು ಕೇಳಬೇಕಾಗಿದೆ. ಹಿಂದೆ ಸರ್ಕಾರದವರು ಇಂಥಾದ್ದೇ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯಲ್ಲಿ ತಂದು ಅದರಿಂದ ಸರ್ಕಾರಕ್ಕೆ ಒಂದು ಅಪಘಾತವಾಗಿದೆ. ಆದ್ದರಿಂದ ಸರ್ಕಾರದವರು ತಾವು ಮಾಡಿದಂತಹ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಇದು ಯಾವ ಸರ್ಕಾರಕ್ಕೂ ಗೌರವ ತರುವಂಥದಲ್ಲ. ಅದಕಾರಣ ಇನ್ನು ಮುಂದೆ ಇಂಥಾ ಲೋಪಗಳಿಗೆ ಅವಕಾಶವನ್ನು ಕೊಡಬಾರದು ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಈಗ ಈ ಮಸೂದೆಯ ಪ್ರಕಾರ 1966ನೇ ಇಸವಿಯ ಲಾಗಾಯ್ತು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು 6¼ ಪರ್ಸೆಂಟ್ ಇದ್ದದ್ದನ್ನು 45 ಪರ್ಸೆಂಟ್ ಮಾಡಬೇಕೆಂದು ಇದರಲ್ಲಿ ನಮೂದಿಸಿದ್ದಾರೆ. ಇದನ್ನು ಮುಂದೆಯೂ ಕೂಡ ಮುಂದುವರಿಸುವ ಹಾಗೆ ಕಾಣುತ್ತದೆ. ಶ್ರೀಮಾನ್ ನಂಜೇಗೌಡರು ಹೇಳಿದ ಹಾಗೆ ಬಡವರು ಕುಡಿಯತಕ್ಕ ಹೆಂಡ ಸಾರಾಯಿ ಏನಿದೆ ಅದರ ಮೇಲೆ ಹೆಚ್ಚು ತೆರಿಗೆಯನ್ನು ಹಾಕಬೇಡಿ. ಆದರೆ ಶ್ರೀಮಂತರು ಕುಡಿಯತಕ್ಕಂಥ ಬ್ರಾಂದಿ, ವಿಸ್ಕಿ, ವೈನ್ ಮುಂತಾದುವುಗಳಿಗೆ ಸೆಂಟ್ ಪರ್ಸೆಂಟ್ ತೆರಿಗೆಯನ್ನು ಬೇಕಾದರೆ ಹಾಕಿ. ಮತ್ತು ಈಗ ಈ ಶೇಂದಿ, ಸಾರಾಯಿ ವಿಾರಾಟದ ಮೇಲೆ 45 ಪರ್ಸೆಂಟ್ ತೆರಿಗೆಯನ್ನು ಏನು ವಿಧಿಸಿದ್ದಾರೆ ಅದನ್ನು

ಮುಂದೆಯೂ ಕೂಡ ಮುಂದುವರಿಸಿದರೆ ನಿಜವಾಗಿಯೂ ಕೂಡ ಬಡವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಆ ರೀತಿ ಮಾಡಬೇಡಿ ಎಂದು ಹೇಳಿ ಈ ಮಸೂದೆಯ ಮೊದಲನೆಯ ಮೂಲ ತತ್ವ ಏನಿದೆ ಅದಕ್ಕೆ ನನ್ನ ಸಮರ್ಥನೆಯನ್ನು ಸೂಚಿಸುತ್ತೇನೆ.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಸ್ವಾಮಿ, ಯಾರೋ ಒಬ್ಬ ಕಂಟ್ರಾಕ್ಟರ್ ತನಗೆ ಅನ್ಯಾಯವಾದಾಗ ಹೈಕೋರ್ಟಿಗೆ ಹೋಗುತ್ತಾನೆ. ಹೈಕೋರ್ಟಿನವರು ಸರ್ಕಾರದವರು ಮಾಡಿದ ಕಾಯಿದೆ ಕಾನೂನು ಬಾಹಿರವೆಂದು ಆತನಿಂದ ವಸೂಲು ಮಾಡಿದ ತೆರಿಗೆಯನ್ನು ವಾಪಸ್ ಕೊಡಬೇಕೆಂದು ತೀರ್ಪು ಕೊಟ್ಟ ಮೇಲೆ ಸರ್ಕಾರದವರು ಆ ಕಂಟ್ರಾಕ್ಟರನಿಗೆ ಹೈಕೋರ್ಟಿನ ತೀರ್ಪಿನ ಪ್ರಕಾರ ತೆರಿಗೆ ಹಣವನ್ನು ವಾಪಸ್ ಕೊಡದೆ ಅದೇ ಕಾಯಿದೆಯನ್ನು ಪುನಃ ಸಿಂಧು ಮಾಡಿ ರಾಜ್ಯಪಾಲರ ಆರ್ಡಿನೆನ್ಸ್ ಹೊರಡಿಸಿ, ನಂತರ ಸಭೆಯ ಮುಂದೆ ಆ ಒಂದು ತಿದ್ದುಪಡಿಯನ್ನು ಪಾಸ್ ಮಾಡಲು ಮುಂದಿನುತ್ತಾರೆ. ಈ ರಾಜ್ಯದಲ್ಲಿ ನ್ಯಾಯಕ್ಕೆ ಬೆಲೆಯೇ ಇಲ್ಲವೆಂದು ಕಾಣುತ್ತದೆ. ಸರ್ಕಾರದವರು ಮಾಡಿದ ತಪ್ಪಿಗೆ ಯಾರೂ ಕೂಡ ಕೋರ್ಟಿಗೆ ಹೋಗುವುದಕ್ಕೆ ಹಕ್ಕೇ ಇಲ್ಲವೆಂದು ಕಾಣುತ್ತದೆ. ಏಕೆಂದರೆ ಕೋರ್ಟಿನವರು ಸರ್ಕಾರದವರು ಮಾಡಿದ ಕಾಯಿದೆಯನ್ನು ಕಾನೂನುಬಾಹಿರವೆಂದು ತೀರ್ಪು ಕೊಟ್ಟ ಕೂಡಲೇ ಅದೇ ಕಾಯಿದೆಯನ್ನು ಸಿಂಧು ಮಾಡಿ ಆರ್ಡಿನೆನ್ಸ್ ಹೊರಡಿಸಿ ಬಿಡುತ್ತಾರೆ. ಇದಕ್ಕಿಂತ ಅನ್ಯಾಯ ಬೇರೆ ಯಾವುದೂ ಇಲ್ಲ. ಅರಾಕ್ ಮತ್ತು ಬೀರ್‌ಗಳಿಗೆ ನಮ್ಮ ರಾಜ್ಯದಲ್ಲಿರುವ ಬೆರೆ ಪ್ರಪಂಚದ ಯಾವ ಭಾಗದಲ್ಲೂ ಕೂಡ ಇಲ್ಲ. ನಮ್ಮ ಸ್ನೇಹಿತರೊಬ್ಬರು ಹೇಳಿದರು, ಜರ್ಮನಿಯಲ್ಲಿ ನೀರಿಗೆ ಬದಲು ಬೀರನ್ನೇ ಕುಡಿಯುತ್ತಾರೆಂದು. ಏಕೆಂದರೆ ಅಲ್ಲಿ ಬಹಳ ಕಡಿಮೆ ರೇಟ್ ಇರುತ್ತದೆ. ಅಲ್ಲಿ ಎಂಟು ಆಣಿಗೆ ಸಿಗುವ ಒಂದು ಬಾಟಲ್ ಬೀರಿಗೆ ನಮ್ಮ ರಾಜ್ಯದಲ್ಲಿ ಐದೂವರೆ ರೂಪಾಯಿ ಕೊಡಬೇಕು. ಈಗಾಗಲೇ ಅಗತ್ಯ ವಸ್ತುಗಳ ಬೆಲೆಗಳನ್ನು ಸಿಕ್ಕಾಪಟ್ಟೆ ಹೆಚ್ಚಿಸಿದ್ದೀರಿ. ಅದರ ಜೊತೆಗೆ ಸಾಮಾನ್ಯ ಜನರು ಕುಡಿಯುವ ಈ ಪಾನೀಯದ ಮೇಲೂ ಕೂಡ 45 ಪರ್ಸೆಂಟ್ ತೆರಿಗೆ ಹಾಕುವುದಕ್ಕೆ ಹೊರಟಿರುವುದು ನೋಡಿದರೆ ಈ ದೇಶದಲ್ಲಿ ಬಡವರು ಇರಬಾರದೆಂದು ಈ ರೀತಿ ಮಾಡುತ್ತಿದ್ದಾರೆಂದು ನಾನಾದರೂ ಕೂಡ ಹೇಳಬೇಕಾಗಿದೆ. ಒಂದು ಕಡೆ ಕಾಂಗ್ರೆಸ್ ಸರ್ಕಾರ ಸೋಷಿಯಲಿಸ್ಟ್ ಸರ್ಕಾರ ಎಂದು ಹೇಳುತ್ತಾರೆ, ಮತ್ತೊಂದು ಕಡೆ ಬಡವರಿಗೆ ಅಗತ್ಯವಾದ ವಸ್ತುಗಳ ಮೇಲೆ ಸಿಕ್ಕಾಪಟ್ಟೆ ತೆರಿಗೆಯನ್ನು ಹಾಕುತ್ತಿದ್ದಾರೆ. ಡಿಕ್ಲೇರ್ಡ್ ಗೂಡ್ಸ್ ಮೇಲೆ ಹೊಸದಾಗಿ ತೆರಿಗೆಯನ್ನು ವಸೂಲು ಮಾಡುವ ಮೊದಲು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆದಿದ್ದರೆ ಈ ತಿದ್ದುಪಡಿಯನ್ನು ತರುವ ಅವಶ್ಯಕತೆಯೇ ಇರಲಿಲ್ಲ ಆಂಧ್ರ, ಮದ್ರಾಸ್, ಕೇರಳ ರಾಜ್ಯಗಳು ಡಿಕ್ಲೇರ್ಡ್ ಗೂಡ್ಸ್ ಮೇಲೆ ತೆರಿಗೆ ವಸೂಲು ಮಾಡುವ ಹಕ್ಕನ್ನು ರಾಷ್ಟ್ರಾಧ್ಯಕ್ಷರಿಂದ ಪಡೆದಿದ್ದಾರೆ. ಆದರೆ ನಮ್ಮ ರಾಜ್ಯದವರು ಮಾತ್ರ ಪಡೆದಿಲ್ಲ. ಹಿಂದೆ ಒಂದು ಕೇಸ್‌ನ್ನು ಹೈಕೋರ್ಟಿನವರು ತಳ್ಳಿಹಾಕಿದಾಗ, ಆ ಕೇಸ್‌ಗೆ ಸಂಬಂಧಪಟ್ಟ ವರ್ತಕರಿಗೆ ಎರಡು ಮೂರು ದಿವಸಗಳಲ್ಲಿಯೇ ಸರ್ಕಾರದವರು ಎರಡು ಕೋಟಿ ರೂಪಾಯಿಗಳನ್ನು ಪಾವತಿ ಮಾಡಿದ ಉದಾಹರಣೆ ಇದೆ. ಈ ಸರ್ಕಾರದ ಉದ್ದೇಶವಾದರೂ ಕೂಡ ವರ್ತಕರಿಗೆ ಮತ್ತು ಸಾಹುಕಾರರಿಗೆ ಅನುಕೂಲ ಮಾಡಿಕೊಡಬೇಕು, ಬಡವರನ್ನು ಶೋಷಣೆ ಮಾಡಬೇಕೆಂದು ಎಂದು ಇರುವಂತೆ ಕಾಣುತ್ತದೆ. ಆ ರೀತಿ ಇಲ್ಲದಿದ್ದರೆ ಈ ಒಂದು ತಿದ್ದುಪಡಿಯನ್ನು ಮೊದಲೇ ಆರ್ಡಿನೆನ್ಸ್ ಹೊರಡಿಸುವ ಮೂಲಕ ತರುತ್ತಿರಲಿಲ್ಲ. ಯಾವ ಕಾನೂನನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ತಳ್ಳಿಹಾಕುತ್ತವೋ ಅದೇ ಕಾನೂನನ್ನು ಈ ಸರ್ಕಾರ ಮತ್ತೆ ಸಿಂಧು ಎಂದು ಪರಿಗಣಿಸುತ್ತಿರುವುದನ್ನು ನೋಡಿದರೆ, ಈ ಸರ್ಕಾರಕ್ಕೆ ಯಾವ ರೀತಿಯಿಂದಲೂ ಕೂಡ ಗೌರವ ಬರುವುದಿಲ್ಲ ಮತ್ತು ಮರ್ಯಾದೆ ಇರುವುದಿಲ್ಲ ಎಂದು ಒತ್ತಿ ಹೇಳಬೇಕಾಗಿದೆ. ಹಿಂದೆ ಕಲೆಕ್ಟ್ ಮಾಡಿದ ತೆರಿಗೆಯನ್ನು ವಾಪಸ್ ಕೊಡುವುದನ್ನು ತಪ್ಪಿಸಲು ಈ ತಿದ್ದುಪಡಿಯನ್ನು ತಂದಿದ್ದೇವೆಂದು ಹೇಳಿದ್ದಾರೆ. ಹಿಂದಿನ ಹೊಂದಾಣಿಕೆಗೆ ಬೇಕಾದರೆ 45 ಪರ್‌ಸೆಂಟ್ ತೆರಿಗೆಯನ್ನು ಹಾಕಿದ್ದರೆ ಒಪ್ಪಬಹುದಾಗಿತ್ತು, ಆದರೆ ಇನ್ನು ಮುಂದೆಯೂ ಕೂಡ 45 ಪರ್‌ಸೆಂಟ್ ತೆರಿಗೆಯನ್ನು ಹಾಕುವುದು ಸರಿಯಲ್ಲ. ಇವತ್ತಿನ ದಿವಸ ಪಾನನಿರೋಧವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಕುಡಿಯುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಇದನ್ನೇ ಆಧಾರವಾಗಿಟ್ಟುಕೊಂಡು ಪ್ರಪಂಚದ ಯಾವ ಮೂಲೆಯಲ್ಲಿಯೂ ಇಲ್ಲದ ರೇಟನ್ನು ಅದರ ಮೇಲೆ ಹಾಕುವುದು ನ್ಯಾಯವಲ್ಲ. ಈಗಾಗಲೇ ಅನೇಕ ಸಂಸಾರಗಳು ಈ ಕಾರಣದಿಂದ ಹಾಳಾಗಿ ಹೋಗುತ್ತಿರುವುದನ್ನು ಸರ್ಕಾರದವರು ಗಮನಿಸಬೇಕು. ಆಹಾರಪದಾರ್ಥಗಳನ್ನು ಕಡಿಮೆ ಬೆಲೆಗೆ ಒದಗಿಸುವುದಕ್ಕೆ ತಮಗೆ ಸಾಧ್ಯವಾಗಿಲ್ಲ, ಈ ಪಾನೀಯವನ್ನಾದರೂ ಕೂಡ ಕಡಿಮೆ ಬೆಲೆಗೆ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಸಮಾಜವಾದ ಎಂಬುದು ಹಾಳಾಗುತ್ತದೆ. ಜನತೆಯ ಶೋಷನೆ ಮಾಡುವುದನ್ನು ನಿಲ್ಲಿಸಬೇಕು. ಈ ತಿದ್ದುಪಡಿಯನ್ನು ಪಾಸ್ ಮಾಡಿದರೆ ಬಡಜನತೆಯ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರಕ್ತವನ್ನು ಹೀರಿದಂತಾಗುತ್ತದೆ. ಅದಕಾರಣ ಬಡಜನರ ಹಿತರಕ್ಷಣೆ ಮಾಡುವ ನಲುವಾಗಿ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಲು ಎಂದು ಸರ್ಕಾರವನ್ನು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್.—ನನ್ಮಾನ್ಯ ಸಭಾಪತಿಗಳೇ, ಇವತ್ತಿನದಿವಸ ಮೈಸೂರು ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲಿನ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತಾ ಈ ಬಿಲ್ಲಿನ ಉಗಮ ಯಾವ ರೀತಿ ಇದೆ, ಇತ್ತೀಚೆಗೆ ಈ ತಿದ್ದುಪಡಿ ಮಸೂದೆಗಳು ಯಾವ ರೀತಿ ಬರುತ್ತಿವೆ ಎಂಬ ಬಗ್ಗೆ ಸರ್ಕಾರದ ಜನರಿಗೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ತರುವ ಉದ್ದೇಶ ಏನಿತ್ತು ಎಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಸರ್ಕಾರದ ಕಾಯಿದೆಯನ್ನು ಹೈಕೋರ್ಟಿನವರು ತಳ್ಳಿಹಾಕಿದ ಪರಿಣಾಮವಾಗಿ ವಸೂಲಿಯಾದ ಟ್ಯಾಕ್ಸನ್ನು ವಾಪಸ್ ಕೊಡುವ ಬದಲು ಅದನ್ನು ಉಳಿಸಿಕೊಳ್ಳುವ ನಲುವಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆ. ಸರ್ಕಾರದವರು ಪಾಸ್ ಮಾಡಿದ ಕಾಯಿದೆಗಳನ್ನು ಹೈಕೋರ್ಟಿನವರು ಏತಕ್ಕೆ ತಳ್ಳಿಹಾಕುತ್ತಾರೆ ಎಂಬುದನ್ನು ಸರ್ಕಾರದವರು ಬಹಳ ಶಾಂತ ರೀತಿಯಿಂದ ಆಲೋಚನೆ ಮಾಡುವುದು ಒಳ್ಳೆಯದು. ಸರ್ಕಾರದವರು ಪ್ರತಿಯೊಂದು ಕಾಯಿದೆ ಮಾಡುವಾಗಲೂ ಕೂಡ ರಾಜ್ಯದ ಎರಡು ಕೋಟಿ ಜನಾಂಗವನ್ನು ಆಷ್ಟೇ ಅಲ್ಲ, ದೇಶದ ಇತರ ರಾಜ್ಯಗಳಿಂದ ಬಂದು ಉದ್ಯೋಗದಲ್ಲಿರುವವರನ್ನು ಕೂಡ ಗಮನದಲ್ಲಿ ಇಟ್ಟುಕೊಂಡು ಮುಂದೆ ಯಾವ ಲೋಪದೋಷಗಳು ಕೂಡ ಬರದಂತೆ ಮಾಡಬೇಕು. ಆ ರೀತಿ ಮಾಡದೇ ಇರುವುದರಿಂದ ಹೈಕೋರ್ಟಿನವರು ಅನೇಕ ಕಾಯಿದೆಗಳನ್ನು ತಳ್ಳಿ ಹಾಕುತ್ತಿದ್ದಾರೆ. ಅವರವರನರದಲ್ಲಿ ಅನೇಕ ತಿದ್ದುಪಡಿಗಳನ್ನು ತಂದು ಪಾಸ ಮಾಡಿಕೊಳ್ಳುತ್ತಿರುವದನ್ನು ನೋಡಿದರೆ, ದೇಶದ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಈಗಿನ ಮಂತ್ರಿಮಂಡಲ ಡಿಸ್‌ಮಿಸ್ ಆಗುವ ಸ್ಥಿತಿಯಲ್ಲಿ ಇದೆಯೋ ಏನೋ ಎಂದು ಕಾಣುತ್ತದೆ. ಕೆಲವು ತಿದ್ದುಪಡಿಗಳನ್ನು ತರುವ ಮೂಲಕ ತಮಗೆ ಬೇಕಾದವರಿಗೆ ರೊಕ್ಕ ಕೊಡುವ ನಲುವಾಗಿ ಮಂತ್ರಿಮಂಡಲದವರು ಮಾತನಾಡಿಕೊಂಡಿದ್ದಾರೋ ಏನೋ ಎಂದು ನನಗನ್ನಿಸುತ್ತದೆ. ಹಾಗೆ ಇಲ್ಲ ಎಂದು ಆ ಕಡೆಯ ನನ್ನ ಮಾನ್ಯ ಸ್ನೇಹಿತರು ಮತ್ತು ಮುಖ್ಯ ಮಂತ್ರಿಗಳು ಹೇಳಬಹುದು. ಹಾಗೆ ಇಲ್ಲ ಎಂದು ಒಪ್ಪಿಕೊಳ್ಳುವುದಾದರೆ ಇಂತಹ ತಿದ್ದುಪಡಿ ಮಸೂದೆಗಳನ್ನು ಅವನರದಲ್ಲಿ ಪಾಸ್ ಮಾಡುವ ಬದಲು ಸಾರ್ವಜನಿಕರ ಅಭಿಪ್ರಾಯ ಪಡೆಯಲು ಏತಕ್ಕೆ ಕಳಿಸುವುದಿಲ್ಲ ಎಂದು ಕೇಳುತ್ತೇನೆ. ಈಗ ಏನು ನಡೆಯುತ್ತದೆ ಎಂದರೆ, ಬೆಳಿಗ್ಗೆ ಅಧ್ಯಕ್ಷರ ಗಮನಕ್ಕೆ ತಂದು, ಮಧ್ಯಾಹ್ನ ಸಭೆಯಲ್ಲಿ ಮಂಡಿಸಿ, ಸಾಯಂಕಾಲದೊಳಗೆ ತಿದ್ದುಪಡಿಗಳನ್ನು ಪಾಸ್ ಮಾಡಿಸಿಕೊಳ್ಳುತ್ತಿದ್ದಾರೆ. ಬೇಕಾದರೆ ರೂಲ್ಸನ್ನು ಸಸ್‌ಪೆಂಡ್ ಮಾಡಿ ಪಾಸ್ ಮಾಡಿಸಿಕೊಳ್ಳುತ್ತಾರೆ.

ಅಧ್ಯಕ್ಷರು.—ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನಾನು ರೂಲ್ಸ್ ತಿಳಿದುಕೊಂಡೇ ಹೇಳುತ್ತಿದ್ದೇನೆ. ನಾನು ಹೇಳುವುದರಲ್ಲಿ ತಪ್ಪಿದ್ದರೆ ವಾಪಸ್ ತೆಗೆದುಕೊಳ್ಳುವುದಕ್ಕೂ ಕೂಡ ತಯಾರಿದ್ದೇನೆ. ಸಮಯ ಬಂದರೆ ವಿರೋಧಪಕ್ಷದವರು ವಾಕ್‌ಔಟ್ ಮಾಡುವಂತಹ ಸನ್ನಿವೇಶವನ್ನು ಕಲ್ಪಿಸಿ, ನಾವುಗಳು ಹೊರಗೆ ಹೋದಾಗ ಪಾಸ್ ಮಾಡಿಕೊಳ್ಳುತ್ತಿದ್ದೀರಿ. ಅಂತಹ ಒಂದು ಚಾಣಾಕ್ಯ ಬುದ್ಧಿಯನ್ನು ಹೊಂದಿರುವ ಈಗಿನ ಮಂತ್ರಿಮಂಡಲದವರು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳನ್ನು ರದ್ದು ಮಾಡಿಬಿಟ್ಟು, ಯಾರ ಭಯವೂ ಇಲ್ಲದೆ ತಮ್ಮ ಕಲನಗಳನ್ನು ಸುನೂತ್ರವಾಗಿ ಬೇಕಾದರೆ ಮಾಡಿಕೊಂಡು ಹೋಗಬಹುದು.

ಅಧ್ಯಕ್ಷರು.—ಕನ್‌ಸ್ಟಿಟ್ಯೂಷನ್ ಪ್ರಕಾರ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಹುಚ್ಚು ಮೊಮ್ಮಗನ ರಾಜ್ಯಭಾರ ಈಗ ನಡೆಯುತ್ತಿದೆ. ಮಹಮದ್‌ಬಿನ್ ತೊಗಲಕ್‌ನಿಗೆ ಹೋಲಿಸಿದರೂ ಕೂಡ, ಅವನಿಗೇ ಅವಮಾನವಾಗುವಂತಹ ರಾಜ್ಯಭಾರವನ್ನು ನಡೆಸಿ ರಾಜ್ಯದ ಜನರಿಗೆ ತಾವು ಅನ್ಯಾಯ ಮಾಡುತ್ತಿದ್ದೀರಿ.

ಅಧ್ಯಕ್ಷರು.—ನಾನು ಏನೂ ಅನ್ಯಾಯ ಮಾಡಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರನ್ನು ಒಳಗೊಂಡು ಸರ್ಕಾರದವರಿಗೆ ನಾನು ಹೇಳುವುದು ಮಸೂದೆಗಳನ್ನು ಸಭೆಯ ಮುಂದೆ ತರುವುದಕ್ಕೆ ಮುಂಚೆ ಜಾಗರೂಕತೆಯಿಂದ ಪರಿಶೀಲನೆ ಮಾಡಬೇಕೆಂದು ಮತ್ತು 7 ದಿವಸದ ಬದಲು 15 ದಿವಸದವರೆಗೂ ಮಸೂದೆಯನ್ನು ನಾವು ಪರಿಶೀಲಿಸಲು ಸಮಯ ಕೊಡಬೇಕೆಂದು.

6-00 P.M.

ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಕೊಡಿ ಎಂದರೆ ಕೊಡುವುದಿಲ್ಲ. ಇದರಿಂದ ಮೋಷನ್ ಮೂವ್ ಮಾಡುವುದಕ್ಕಾಗುವುದಿಲ್ಲ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಸೆಕ್ರೆಟೇರಿಯೆಟ್‌ನಲ್ಲಿ ಸದಸ್ಯರಿಗೆ ಒಂದು ರೀತಿ ಟ್ರೈನಿಂಗ್ ಇದಿರಿ. ಇಲ್ಲಿ ಮಾಡಿದಂಥ ಕಾಯಿದೆ ಹೈಕೋರ್ಟ್‌ನಲ್ಲಿಯಾಗಲಿ, ಸುಪ್ರೀಂ ಕೋರ್ಟ್‌ನಲ್ಲಿಯಾಗಲಿ ಥಾಲೆಂಜ್ ಮಾಡುತ್ತಾರೆ. ಇದಕ್ಕೆ ನೂರಾರು ರಿಟ್ ಅರ್ಜಿಗಳು ಈ ಕಾಯಿದೆ ಮೇಲೆ ಬಂದಿರುವುದನ್ನು ನೋಡಿದರೂ ಸಹಿತ ಇದನ್ನು ಇತ್ಯರ್ಥ ಮಾಡದೆ ಇನ್ನೊಬ್ಬ ನ್ಯಾಯಾಧೀಶರನ್ನು ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ. ಈ ರೀತಿ ಮಾಡುವುದನ್ನೆಲ್ಲಾ ಪರಮಾತ್ಮ ಕಂಡುಕೊಂಡಿದ್ದಾನೆ. ನೀವು ಈ ರೀತಿ ಮಾಡುವುದು ನಮಂಜಸವಲ್ಲ.

ಸ್ವಾಮಿ, ಈವೊತ್ತು ಹೈಕೋರ್ಟಿನವರು ಯಾವರೀತಿಯಿಂದಲಾದರೂ ಅದನ್ನು ಸ್ಟೈಕ್ ಔಟ್ ಮಾಡಿದರೆ ಅದು ಹೈಕೋರ್ಟ್‌ನವರ ತಪ್ಪೇ, ಸರ್ಕಾರದ ತಪ್ಪೇ, ಸರ್ಕಾರಕ್ಕೆ ಬರೆದುಕೊಡುವವರ ಬರವಣಿಗೆಯವನ ತಪ್ಪೇ ಅಥವಾ ಅಡ್ವೋಕೇಟ್ ಜನರಲ್‌ರವರು ವಾದ ಮಾಡುವಾಗ ತಪ್ಪು ಮಾಡಿದ್ದಾರೆಯೇ, ಇದನ್ನೆಲ್ಲಾ ಈ ಸಭೆಯಲ್ಲಿ ವಿಚಾರಣೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಅಧ್ಯಕ್ಷರಿಗೆ ಹೇಳಿದೆ ಮತ್ತು ಹೈಕೋರ್ಟ್ ಆರ್ಡರ್ ಏನು ಇದೆಯೋ ಅದನ್ನು ಈ ಸಭೆಯಲ್ಲಿ ಸರ್ಕ್ಯುಲೇಟ್ ಮಾಡಿ ಎಂದು ಹೇಳಿದೆ. ಪ್ರತಿಯೊಂದು ಕಾಯಿದೆಯನ್ನು ಈ ಸಭೆ ತಿಳಿದುಕೊಂಡು ಎಕ್ಸಿಕ್ಯೂಟೀವ್ ಅಧಿಕಾರಿಗಳನ್ನು ವಿಚಾರಿಸಲು ಅವರ ಬಗ್ಗೆ ತನಿಖೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ನಾನು ಒಂದು ಮೋಷನ್ ಬರೆದುಕೊಟ್ಟಿದ್ದೆ ಫೈಲ್ ತರಿಸಿ ನೋಡಿ. ನನ್ನ ಮೋಷನ್ ಅಡ್ಮಿಟ್ ಆಗಲಲ್ಲ. ಆ ಫೈಲನ್ನು ನಿಮಗೆ ತಂದುಕೊಡುವ ಬುದ್ಧಿಯೇ ಅವರಿಗಿಲ್ಲ. ಆ ಪ್ರಶ್ನೆಗೆ ಉತ್ತರ ತಿಳಿದುಕೊಳ್ಳುವಾ ಎಂದರೆ ಸಿಕ್ಕುವುದಿಲ್ಲ. ಆ ಫೈಲು ತರಿಸಿ ನೋಡಿದರೆ ಅವರ ಕೈಕೆಳಗೆ ಇರತಕ್ಕಂಥ ಅಧಿಕಾರಿಗಳು ಏನು ಅನಾಚಾರ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆ ಅಧಿಕಾರಿಗಳಿಗೆ ಪನಿಷ್ ಮಾಡುವುದಕ್ಕೂ ಆಗುವುದಿಲ್ಲ. ಈ ರೀತಿಯಾವ ಅಡ್ಮಿನಿಸ್ಟ್ರೇಷನ್ ನಮ್ಮ ಸೆಕ್ರೆಟೇರಿಯೆಟ್‌ನಲ್ಲಿ ನಡೆಯುತ್ತಾ ಇದೆ. ಸರ್ಕಾರಕ್ಕೆ ಹಣದ ತೊಂದರೆ ಇದೆಯೆಂದು ಹೇಳಿ ಈ ಸೇಂದಿ ನಾರಾಯಿ ಮೇಲೆ ಮಾರಾಟ ತೆರಿಗೆ ಜಾಸ್ತಿ ಹಾಕುವುದು ಸರಿಯಲ್ಲ. ಈ ರೀತಿಯ ನಿಷ್ಪ್ರಯೋಜಕವಾದ ಕಾಯಿದೆ ಮಾಡುವುದರಿಂದ ಪ್ರಯೋಜನವಿಲ್ಲ. ನೀವು ಸಿವಿಲ್ ಲಯಬಿಲಿಟಿ ಅವನ ಮೇಲೆ ಹೊರಿಸುತ್ತೀರಿ. ಕ್ರಿಮಿನಲ್ ಲಯಬಿಲಿಟಿ ಅವನ ಮೇಲೆ ಹೊರಿಸಬೇಕು. ಅವನನ್ನು ಕ್ರಿಮಿನಲ್ ಲಯಬಿಲಿಟಿಗೆ ಒಳಪಡಿಸಬೇಕು. ನೀವು ಈಗ ಮಾಡದಿದ್ದರೆ ಮುಂದೆ ಅಂತಹ ಕಾಲ ಬರುತ್ತದೆ ಎಂದು ಜನ ಎಚ್ಚರಿಕೆ ಕೊಡುತ್ತಾರೆ.

ಸ್ವಾಮಿ, ಹಿಂದೆ ಯಾವರೀತಿ ಕಾಯಿದೆಗಳನ್ನು ಮಾಡುತ್ತಾ ಇದ್ದರು ಎಂದರೆ ಬ್ರಿಟೀಷರ ಕಾಲದಲ್ಲಿದ್ದ ಕಾಯಿದೆ ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರು ನಿಷ್ಣಾತರಂತೆ ವಕೀಲರು. ಹಿಂದೆ ಯಾವುದಾದರೂ ಕಾಯಿದೆ ಮಾಡಬೇಕಾದರೆ, ವ್ಯಾಪಾರ ಸಂಸ್ಥೆಗಳನ್ನಾಗಲಿ, ವಾಣಿಜ್ಯ ಸಂಸ್ಥೆಗಳನ್ನಾಗಲಿ ಸಂಘಸಂಸ್ಥೆಗಳನ್ನಾಗಲಿ, ಇನ್ನೂ ಇತರ ಪ್ರಮುಖ ವ್ಯಕ್ತಿಗಳ ಅಭಿಪ್ರಾಯವನ್ನು ಬಹಳಮಟ್ಟಿಗೆ ಕೇಳುತ್ತಾ ಇದ್ದರು. ಆ ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ಕಳುಹಿಸುತ್ತಾ ಇದ್ದರು. ಆ ರೀತಿ ಯಾವ ಕಾಯಿದೆಗಾಗಲಿ ಜನತೆಯ ಅಭಿಪ್ರಾಯ ಸಂಗ್ರಹಣೆ ಮಾಡಬೇಕು. ಈ ಸಭೆಯಲ್ಲಿ ಕಾಯಿದೆ ಬಲ್ಲಂಥ ಸದಸ್ಯರಿದ್ದಾರೆ. ಅದರಲ್ಲಿ ಶ್ರೀಮಾನ್ ಹೆಚ್.ಎ. ಕೌಜಲಗಿ ಅವರೂ ಒಬ್ಬರು. ಜನತೆಯ ಹಿತರಕ್ಷಣೆ ಮಾಡುವವರು ಎಂದು ಹೇಳಿಕೊಳ್ಳುವವರು ಜನತೆಯ ಅಭಿಪ್ರಾಯವನ್ನು ಸಂಗ್ರಹಣೆ ಮಾಡದೆ ಈ ರೀತಿ ಮಾಡಿದ್ದಾರೆ.

ಇನ್ನು ಆರ್ಡಿನೆನ್ಸ್ ಎನ್ನುವ ಶಬ್ದ ಹೊಸದಲ್ಲ. ಇದನ್ನು ಯಾವಾಗ ತರಬೇಕು ಎಂದರೆ ಯಾವಾಗ ರೆಜಿಸ್ಲೇಟೀವ್ ಅಸೆಂಬ್ಲಿ ಮತ್ತು ಕೌನ್ಸಿರ್ ಕೊಡುವುದಿಲ್ಲವೋ, ಯಾವಾಗ ದೇಶಕ್ಕೆ ಗಂಡಾಂತರ ಪರಿಸ್ಥಿತಿ ಒದಗುತ್ತದೋ ಅಂತಹ ಸಂದರ್ಭದಲ್ಲಿ ಇಂತಹ ಆರ್ಡಿನೆನ್ಸನ್ನು ತರಬಹುದು ಎಂದು ನನಗೆ ಅನಿಸುತ್ತದೆ. ಆ ರೀತಿಯಾಗಿ ಆರ್ಡಿನೆನ್ಸನ್ನು ಹೊರಡಿಸುವ ಅಧಿಕಾರವನ್ನು ಗವರ್ನರಿಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಕೊಟ್ಟಿದೆ. The Governor can always act on the advice of the wise counsel of Ministers. ಗೌರ್ನರಿಗೆ ಉಪದೇಶ ಕೊಡುವ ಜನ ಯಾವರೀತಿಯಾಗಿರಬೇಕು? ಕೌನ್ಸಿರ್ ಆಫ್ ಮಿನಿಸ್ಟರ್ಸ್ ಯಾವ ವೈಜ್ ಕೌನ್‌ಸೆಲ್ ಕೊಡುತ್ತಾ ಇಲ್ಲ. ಆದುದರಿಂದ ಈ ಆರ್ಡಿನೆನ್ಸ್‌ನ್ನು ಈಗ ತಂದಿರುವುದಕ್ಕೆ ಇವನ್ನು ಏನನ್ನಬೇಕೋ, ಇವರಿಗೆ ಯಾವ ಶಬ್ದದಿಂದ ಕರೆಯಬೇಕೋ ನನಗೆ ಗೊತ್ತಾಗುವುದಿಲ್ಲ. ಮಂತ್ರಿಗಳು ಗವರ್ನರಿಗೆ ಆಡ್ವೈಸ್ ಕೊಟ್ಟು ಬಿಡುತ್ತಾರೆ, ಅದರಂತೆ ಗವರ್ನರ್ ರುಜು ಹಾಕಿದರೆ ಒಂದು ಕಾಯಿದೆ ಆಗುತ್ತದೆ. ಆ

(ಶ್ರೀ ಕೆ. ಎಚ್. ಪಾಟೀಲ್)

ಕಾಯಿದೆಯೂ ಕೂಡ ಹೈಕೋರ್ಟಿಗೆ ಥಾರೆಂಜಿಗೆ ಹೋಗುತ್ತದೆ. ಏತಕ್ಕೆ ಈ ರೀತಿ ಕಾಯಿದೆಗಳನ್ನು ಮಾಡಿ ಹೈಕೋರ್ಟಿನಲ್ಲಿ ಥಾರೆಂಜ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ? ಇಂತಹ ಕಾಯಿದೆಯನ್ನು ನೀವು ಏತಕ್ಕೆ ಡಿಸ್‌ಪ್ರೂವ್ ಮಾಡಲಿಲ್ಲ ಎಂದು ನಮ್ಮನ್ನು ಅರಿಸಿ ಇಲ್ಲಿಗೆ ಕಳುಸಿದಂಥ ಜನ ಕೇಳಬಹುದು. ಇದರಿಂದ ನಾವು ಎರಡು ಕೋಟಿ ಜನತೆಯ ಹಿತರಕ್ಷಣೆ ಮಾಡಿದಂತಾಗುವುದಿಲ್ಲ. ನಾವು ಜನತೆಯ ಮುಂದೆ ತಪ್ಪುಗಾರರಾಗುತ್ತೇವೆ. ಆದುದರಿಂದ ಇನ್ನು ಮುಂದಕ್ಕಾದರೂ ಒಂದು ಕಾಯಿದೆ ಮಾಡಿದರೆ ಅದರಲ್ಲಿ ತಪ್ಪು ಇದರಂತೆ ಮಾಡಬೇಕು ಎಂದು ಹೇಳುತ್ತೇನೆ. ಎಲ್ಲರೂ ಮರ್ಯಾದೆ ಕೊಡುವಂಥ ಕಾಯಿದೆ ಇರಬೇಕು. ಆರ್ಡಿನೆನ್ಸನ್ನು ಬಹಳ ರೇರ್ ಆಗಿ ಹೊರಡಿಸಬೇಕು. ಯಾವಾಗ ಯಾವ ಸಂದರ್ಭದಲ್ಲಿ ಆರ್ಡಿನೆನ್ಸ್‌ನ್ನು ಹೊರಡಿಸಬೇಕು ಎಂದು ಅಧ್ಯಕ್ಷರನ್ನು ಕೇಳಿರಿ. ಇದನ್ನೆಲ್ಲಾ ತಿಳಿದುಕೊಂಡು ಆರ್ಡಿನೆನ್ಸ್‌ನ್ನು ಹೊರಡಿಸಿದ್ದೀರಾ ? ಟ್ಯಾಕ್ಸ್ ಕೊಡಬೇಕೆಂಬ ಬಗ್ಗೆ ಇಂಥ ಹೊಸ ಆರ್ಡಿನೆನ್ಸ್‌ನ್ನು ಮುಂಚಿತವಾಗಿಯೇ ಹೊರಡಿಸುವ ಅವಶ್ಯಕತೆ ಏನು ಇತ್ತು ? ಇನ್ನು 15 ದಿವಸ ತಡವಾಗಿದ್ದರೆ ನಿಮ್ಮ ಮಂತ್ರಿಮಂಡಲ ಬಿದ್ದು ಹೋಗುತ್ತಿತ್ತೊ ? ನಿಮಗೇನಾದರೂ ಮಾನ ಮರ್ಯಾದೆ ಹೋಗಿ, ನಿಮಗೆ ರೊಕ್ಕ ಇಲ್ಲದೇ ಹೋಗುತ್ತಿತ್ತೊ ? ಅಥವಾ ರಾಮಕೃಷ್ಣ ಹೆಗಡೆಯವರ ಬೊಕ್ಕಸ ಬರಿದಾಗುತ್ತಿತ್ತೊ ? ಅದುದರಿಂದ ಅಧಿಕಾರ ನೂತ್ರವನ್ನು ಹಿಡಿದುಕೊಂಡಿರತಕ್ಕಂಥ ನೀವು ಈ ರೀತಿ ಆರ್ಡಿನೆನ್ಸ್ ಹೊರಡಿಸಿರುವುದು ಸಭಾಂಜನಸಲ್ಲ ಎಂದು ನಾನು ತಮ್ಮನ್ನು ನವಿನಯನದಿಂದ ಬಿನ್ನಹ ಮಾಡಿಕೊಳ್ಳುತ್ತೇನೆ.

ಮಹಾತ್ಮ ಗಾಂಧಿಯವರು ಹೇಳಿದಂಥ ಮಾತನ್ನು ಈ ಹೊತ್ತು ಹೇಳಬಹುದೋ, ಹೇಳಬಾರದೋ ಗೊತ್ತಿಲ್ಲ. ಗಾಂಧಿಜಿಯವರ ಅನುಯಾಯಿಗಳಾದ ಇವರು ಗಾಂಧಿ ಶತಾಬ್ದಿಗಾಗಿ ಲಕ್ಷಾವಧಿ ರೂಪಾಯಿಗಳನ್ನು ಖರ್ಚು ಮಾಡಲು ಹೊರಟಿದ್ದಾರೆ. ಇದರಲ್ಲಿ ಮಾತ್ರ ಇವರು ಎಲ್ಲರಿಗಿಂತ ಮುಂದೆ ಇದ್ದಾರೆ. ಇಂಥವರು ಯಾವ ದೃಷ್ಟಿಯಿಂದ ಗಾಂಧೀಜಿಯವರ ಹೆಸರನ್ನು ಉಪಯೋಗಪಡುತ್ತಿದ್ದಾರೆ ? ಮಹಾತ್ಮ ಗಾಂಧೀಜಿಯವರು ಹೇಳಿರುವ ಮಾತನ್ನು ಅನೇಕ ಬಾರಿ ಈ ಸಭೆಯಲ್ಲಿ ಹೇಳಿದ್ದೇನೆ. ಅದನ್ನು ಪುನರಪಿ ಹೇಳುತ್ತೇನೆ. "The income derived out of sale of toddy is, in my opinion, equivalent to the income of a prostitute." ಎಂದು ಹೇಳಿದ್ದಾರೆ. ಮಹಾತ್ಮ ಗಾಂಧೀಜಿಯವರು ನಿಮ್ಮ ಗುರುಗಳು, ರಾಜಕೀಯ ಗುರುಗಳು ಎನ್ನುವುದಾದರೆ, ಅವರು ಒಬ್ಬ ಆದರ್ಶ ಪುರುಷರು ಎಂದು ಹೇಳುವುದಾದರೆ ಈಗ ಸಭೆಯು ಮುಂದೆ ತಂದಿರುವ ಕಾಯಿದೆಯನ್ನು ಒಂದು ವರ್ಷ ಬಿಡುವುದಕ್ಕೆ ಆಗುತ್ತಿರಲಿಲ್ಲವೇ ? ಕೆಲವು ಕಾಲವಾದರೂ ಅದನ್ನು ಬಿಡಲಿಕ್ಕೆ ಪ್ರಯತ್ನ ಮಾಡಿರಿ ಎಂದು ಹೇಳುತ್ತೇನೆ.

ಈ ಕಾಯಿದೆಯಲ್ಲಿ ಒಂದು ವಿಚಿತ್ರವಾದ ಕಲಮನ್ನು ಸೇರಿಸಿದ್ದಾರೆ. ಅದು ಹೀಗಿದೆ :

> "No suit or proceeding shall be entertained, maintained or continued in any court for the refund of any tax so paid ;"

ಟ್ಯಾಕ್ಸ್ ಕಟ್ಟಿದ್ದರ ಮೇಲೆ ಕೋರ್ಟಿಗೆ ಹೋಗಬಾರದು, ಮೇಲಿನವರ ಹತ್ತಿರ ಹೋಗಬಾರದು, ಇಲ್ಲಿಯೂ ಕೇಳುವ ಹಾಗಿಲ್ಲ, ಅಲ್ಲಿಯೂ ಕೇಳುವ ಹಾಗಿಲ್ಲ ಎಂದರೆ ಎಲ್ಲಿ ಕೇಳಬೇಕು ? ನಾವು ಮಾಡುವುದು ಸರಿ ಎನ್ನುವ ವಿಚಿತ್ರವಾದ ಧೋರಣೆಯನ್ನು ತಾಳುವುದಾದರೆ ನಿಮಗೂ ಹಿಟ್ಲರಸಿಗೂ ಏನು ವ್ಯತ್ಯಾಸವಿದೆ ಎಂದು ಕೇಳುತ್ತೇನೆ. ಹಿಟ್ಲರನಾದರೂ ಕೆಲವು ಮಂದಿ ಬುದ್ಧಿವಂತರಾದ ಸಲಹೆಗಾರರನ್ನು ನೇಮಿಸಿಕೊಂಡಿದ್ದ. ಆದರೆ ಇವರಲ್ಲಿ ಅದೂ ಕಾಣುವುದಿಲ್ಲ. ಅವರ ಪಕ್ಷದಲ್ಲಿ ಕೂಡ ಛಿದ್ರ ವಿಚ್ಛಿದ್ರವಾಗಿ ಮನಸ್ಸು ಬಂದ ಹಾಗೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಅಸೆಂಬ್ಲಿಯಲ್ಲಿ ಆ ಪಕ್ಷದವರು ಕೇಳುವುದಕ್ಕೆ ಅವರಿಗೆ ತೊಂದರೆ ಇದೆ, ನಾವಾದರೂ ಮಾಹಿತಿ ಸಿಕ್ಕದೆ ಕೈಕಟ್ಟಿ ಕುಳಿತುಕೊಳ್ಳಬೇಕಾಗಿದೆ. ಒಂದು ರಿಟ್ ಪಿಟಿಷನ್ ತೀರ್ಮಾನವಾಗಿರುವಾಗ ಅದಕ್ಕೆ ಸಂಬಂಧಪಟ್ಟ ತೀರ್ಪಿನ ಅಂಶಗಳನ್ನು ಎಲ್ಲ ಸದಸ್ಯರಿಗೂ ಓದಿಸುವುದು ಸರ್ಕಾರದ ಕರ್ತವ್ಯವೆಂದು ಅವರು ತಿಳಿಯುವುದಿಲ್ಲವೇ ? ಐದು ನಿಮಿಷಗಳಲ್ಲಿ ಪಾಸು ಮಾಡುತ್ತೇವೆಂದು ಅವರು ಹೇಳುತ್ತಾರೆ. ಆ ಕಡೆಯಲ್ಲಿ ನನಗಿಂತ ಸಾವಿರ ಪಾಲು ತಿಳುವಳಿಕೆಯುಳ್ಳವರಿದ್ದಾರೆ. ಅವರಿಗೆ ಇಲ್ಲಿ ಮಾತನಾಡಿವೇಳೆ ಕಳೆಯಬೇಕಾಗಿಲ್ಲ, ಲಘುವಾಗಿ ಪಾಸುಮಾಡಿಕೊಳ್ಳಬೇಕಾಗಿದೆ. ಕಾಯಿದೆಗಳ ಬಗ್ಗೆ ವಿರೋಧ ಪಕ್ಷದ ಸದಸ್ಯರು ಮಾತ್ರ ಮಾತನಾಡುತ್ತಿದ್ದಾರೆ. ಆ ಕಡೆಯ ಸದಸ್ಯರು ಯಾರೂ ಮಾತನಾಡುವುದಿಲ್ಲ. ಇದಕ್ಕೆ ಕಾರಣವಾದರೂ ಏನು ? ಮಂತ್ರಿಗಳ ಬಗ್ಗೆ ಆದರಭಾವವಿದೆಯೇ ಎಂದರೆ ಅದೂ ಅಲ್ಲ.

ಎಷ್ಟೋ ರಿಟ್ ಆರ್ಜಿಗಳು ಹೈಕೋರ್ಟಿನಲ್ಲಿ ಬರುತ್ತಿವೆ. ಅವುಗಳನ್ನು ಪುರಸ್ಕರಿಸಿ ನಿಮ್ಮ ಕಾಯಿದೆಯನ್ನು ಕೋರ್ಟಿನವರು ತಳ್ಳಿ ಹಾಕಿದ ನಂತರ ಆದನ್ನು ಆಚರಣೆಗೆ ತಾರದೆ ಎಷ್ಟು ಕಂಚೆಪ್ಟ್ ನಿಮ್ಮ ಮೇಲೆ ಆಗುತ್ತಿದೆ? ನಿಮ್ಮ ನೌಕರರೇ ನಿಮ್ಮ ಮೇಲೆ ಎಷ್ಟು ರಿಟ್‌ಗಳನ್ನು ಹಾಕಿದ್ದಾರೆ? ಅವರಿಗೆ ಕೊಡಬೇಕಾದ ಸಲವತ್ತುಗಳನ್ನು ಕೊಡದೆ ಅವರಿಗೆ ಪ್ರಮೋಷನ್ ಕೊಡಲು ಜಾಗವಿಲ್ಲ, ಜಾಗವಿದ್ದರೆ ಕೊಡುತ್ತಿದ್ದೆವು ಎಂದು ಹೇಳುತ್ತೀರಿ. ರಿಜೈರ್ ಆಗಿ ಮನೆಗಳಿಗೆ ಹೋಗುವಂಥವರನ್ನು ಕರೆದುಕೊಂಡು ಬಂದು ನೇಮಕ ಮಾಡುತ್ತ ಇದ್ದೀರಿ. ಹುಡುಗರು ನಿಮ್ಮ ಮಾತು ಕೇಳುವುದಿಲ್ಲ ನೀವು ಹೇಳಿದ ಹಾಗೆ ಬರೆಯುವುದಿಲ್ಲ ಎಂದು ಹೀಗೆ ಮಾಡುತ್ತಿದ್ದೀರಾ! ನೀವು ಹೇಳಿದಂತೆ ಬರೆಯಬೇಕು, ಆಫೀಸಿನಲ್ಲಿ ಕುಳಿತು ಬರೆಯುತ್ತೇವೆಂದರೆ ನೀವು ಕೇಳುವುದಿಲ್ಲ. ನಿಮ್ಮ ಮನೆಯಲ್ಲಿ ಅಟ್ಟದ ಮೇಲೆ ಬಂದು ಕುಳಿತುಕೊಂಡು ಬರೆದರೆ ಇನ್‌ಕ್ರಿಮೆಂಟ್, ಪ್ರಮೋಷನ್, ಎಕ್ಸ್‌ಟೆನ್‌ಷನ್ ಕೊಡುತ್ತೇವೆಂದು ಹೇಳಿ ಕೆಲಸ ಮಾಡಿಸುತ್ತೀರಿ. ಇಂಥ ಅಧಿಕಾರಿಯಿಂದ ಇಂಥ ಕಾಯಿದೆ ಬರುತ್ತದೆ. ಇದು ಸಮಂಜಸವಾದುದಲ್ಲ. ಕಾಯಿದೆಯಲ್ಲಿ ನಮೂದಿಸಿರುವ ಕ್ಲಾಜ 3 (ಬ) ನ್ಯಾಯ ಸಮ್ಮತವಾದುದಲ್ಲ, ಘಟನಾತ್ಮಕವಾಗಿ ಸರಿಯಿಲ್ಲ. ಇದಲ್ಲದೆ ಈ ಸಂಬಂಧದಲ್ಲಿ ನಮಗೆ ಬೇಕಾದ ಮಾಹಿತಿಯನ್ನೂ ಪೂರೈಸಲಿಲ್ಲ, ಹೈಕೋರ್ಟ್ ನಿರ್ಣಯ ನಮಗೆ ಕೊಟ್ಟಿಲ್ಲ. ಇವು ಎಲ್ಲ ನಡನ್ಯರ ಕೈಗೂ ಬಂದಿದ್ದರೆ ಅದರಲ್ಲಿರುವ ಅಭಿಪ್ರಾಯವನ್ನು ತೆಗೆದುಕೊಂಡು ಕೋರ್ಟಿಗೆ ಹೋಗುತ್ತಾರೆಯೋ ಏನೋ ಎನ್ನುವ ಅನುಮಾನದಿಂದ ಕೊಟ್ಟಿಲ್ಲವೆಂದು ಕಾಣುತ್ತದೆ.

ಕೋರ್ಟಿನವರು ಡಿಕ್ರಿ ತೆಗೆದುಕೊಂಡಿದ್ದರೂ ಕೂಡ ಎನ್‌ಫೋರ್ಸ್ ಮಾಡಬಾರದು ಎನ್ನುವ ಅಂಶವನ್ನೂ ಸೇರಿಸಿದ್ದಾರೆ. ಡಿಕ್ರಿ ಆದುದನ್ನೂ ತೆಗೆದುಕೊಳ್ಳಬಾರದು ಎಂದರೆ ಕೋರ್ಟ್ ಏಕೆ ಬೇಕು! ಅದನ್ನೂ ತೆಗೆಯಿ ಹಾಕಿ. ಮಾನವಂತರಿದ್ದರೆ, ಯಾವತ್ತಿಗೂ ಕೋರ್ಟಿಗೆ ಒಪ್ಪಿಸಿದ ಮೇಲೆ ಅವರು ಮಾಡಿದಂಥ ನಿರ್ಣಯಗಳಿಗೆ ಮನ್ನಣೆಯನ್ನು ಕೊಡಬೇಕು, ಅದಕ್ಕೆ ತಲೆಬಾಗ ಬೇಕು. ಸ್ವಾಮಿ, ಈ ಹೊತ್ತು ಕಾಯಿದೆಯಲ್ಲಿ ಸೂಚಿಸಿರುವ ತಿದ್ದುಪಡಿ ಎಷ್ಟರಮಟ್ಟಿಗೆ ನ್ಯಾಯ ಸಮ್ಮತವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಕೋರ್ಟಿನ ಡಿಕ್ರಿ ಆಗಬಾರದು, ನಿಮ್ಮವರಿಗೆ ಬೇಕಾದಷ್ಟು ಮಾಡುವುದಕ್ಕೆ ಅವಕಾಶವಿರಬೇಕು ಎನ್ನುವುದಾದರೆ ಅದು ಡಿಸಿಪ್ಲಿನರಿ, ಇಲ್ಲಿಗಲ್ ಆಗಬಹುದು. ಸರ್ಕಾರದವರು ಕೆಲವು ಖಟ್ಲೆಗಳನ್ನು ನಡೆಸಲು ಅವರ ಏಜೆಂಟರನ್ನು ವಕೀಲರನ್ನಾಗಿ ನೇಮಿಸಿದ್ದಾರೆ. ಒಮ್ಮೆ ಹಾಜರಾದರೆ 400 ರೂಪಾಯಿ, ಒಂದೊಂದು ಸಾವಿರ, ಎರಡೆರಡು ಸಾವಿರ ಹೀಗೆ ಕೊಡುವ ಪ್ರಯತ್ನ ಮಾಡಿದ್ದಾರೆ. ವಕೀಲರಿಗೆ ಕೊಡುವ ರೊಕ್ಕದಲ್ಲಿ ಇವರಿಗೆ ಎಷ್ಟು ಪರ್ಸೆಂಟೇಜ್ ಇದೆಯೋ ನನಗೆ ಗೊತ್ತಿಲ್ಲ. ಇವೆಲ್ಲ ಮಾತುಗಳನ್ನೂ ನೂಕ್ಷ್ಮ ರೀತಿಯಿಂದ ತಾವು ಪರಿಶೀಲನೆ ಮಾಡಿಕೊಂಡು ನಮ್ಮಲ್ಲಿ ನ್ಯಾಯವಿರುವಾಗ, ಈ ಕಾಯಿದೆಯ ನಡವಳಿಕೆಯಲ್ಲಿ ಒಬ್ಬರಿಗೊಂದು ಒಬ್ಬರಿಗೆ ಇನ್ನೊಂದು ಆಗಬಾರದು, ಘಟನೆಗೆ ವಿರೋಧವಾಗಿ ಯಾವುದನ್ನೂ ಮಾಡಬಾರದು. ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ ಆಗುವ ನಿರ್ಣಯಕ್ಕೆ ಎಲ್ಲರೂ ಮನ್ನಣೆಕೊಡುವಂತೆ ಆಗಬೇಕು ಎಂದು ಮಾನವಂತರ ಸರ್ಕಾರ ಇದ್ದಾಗ ಹೇಳುತ್ತಿದ್ದರು. ಅದನ್ನು ಇವರೂ ಅನುಸರಿಸಬೇಕೆಂದು ನಾನು ಕಳಕಳಿಯಿಂದ ಬಿನ್ನಹ ಮಾಡುತ್ತಿದ್ದೇನೆ. ಇವರು ನಮ್ಮ ಘಟನಾಬದ್ಧವಾದ ಹಕ್ಕುಗಳನ್ನು ಹತ್ತಿಕ್ಕಲಿಕ್ಕೆ ಹೊರಟಿದ್ದಾರೆ. ಅದರ ಸಲುವಾಗಿ ಸರ್ಕಾರವನ್ನು ಘಟನಾಬದ್ಧವಾಗಿ ತೆಗೆಯಹಾಕಬೇಕೆಂದು ನಾವು ಕೇಳಬೇಕೋ, ಚಳುವಳಿ ನಡೆಸಬೇಕೋ, ಜನತೆ ಇವನ್ನು ತೆಗೆಯಬೇಕೆಂದು ಹೇಳಬೇಕೋ ಎನ್ನುವಂಥ ಸಂದರ್ಭ ತ್ವರಿತ ರೀತಿಯಿಂದ ಬರುವುದಕ್ಕೆ ಹತ್ತಿದೆ. ಇದಕ್ಕೆ ಅವಕಾಶ ಕೊಡಬಾರದು. ಇಷ್ಟು ದಿವಸ ಆಗಿರುವುದನ್ನು ಮರೆತು ಇನ್ನು ಮುಂದಾದರೂ ಕೂಡ ಕಾಯಿದೆಯನ್ನು ನಮ್ಮೆದುರಿಗೆ ತರುವಾಗ ಸರ್ವರೀತಿಯಿಂದ ಜನರ ಅಭಿಪ್ರಾಯವನ್ನು ಪಡೆದು ಮನೆಯಲ್ಲಿ ನೋಟ್ ಬರೆಸದೆ ಶ್ರೀಮಾನ್ ಹನುಮಂತಯ್ಯನವರು ಕಟ್ಟಿಸಿರುವ ಈ ದೊಡ್ಡ ಕಟ್ಟಡದಲ್ಲೇ ಬರೆಸುವುದಕ್ಕೆ ಅವಕಾಶ ಮಾಡಿ ಇಂಥ ಬಿಲ್ಲುಗಳನ್ನು ನಮ್ಮೆದುರಿಗೆ ತರಬೇಕೆಂದು ವಿನಂತಿಮಾಡಿ ಈ ವನೂದೆಯನ್ನು ವಿರೋಧಿಸುತ್ತೇನೆ. ಇಂದು ಶ್ರೀ ರಾಮಕೃಷ್ಣ ಹೆಗ್ಗಡೆಯವರು ಇಲ್ಲದಿದ್ದರೂ ಕೈಕಾರಿಕಾ ಸಚಿವರು ದೊಡ್ಡ ಮನಸ್ಸು ಮಾಡಿ ಇದರ ಹಿನ್ನೆಲೆ ಮತ್ತು ತತ್ವವನ್ನು ಒಪ್ಪಬೇಕೆಂದು ಮನವಿ ಮಾಡುತ್ತೇನೆ.

†Sri M. RAJASEKHARA MURTHY.—Sir, I heard with keen interest the argument advanced by the hon. Members and the sympthy they have shown to those who have been addicted to arrack while so saying, I must bring to the notice of the hon. Members that there are only two points in this Bill, (1) Section 2 relating to amendment of Schedule II, which intends to raise the sales tax from 6¼ per cent to 45 per cent,

(SRI M. RAJASEKHARA MURTHY)

and (2) Section 3 to validate the action already taken while collecting the tax. We know that while computing the taxable turnover, the Assessing Authority has to take into consideration not only the basic price, but also the tax collected on that. The contractors, who are aggrieved, went in a writ petition to the High Court and they contended that the Government have no right to collect the tax on the entire sale proceeds, but only on the basic price. The High Court held that the tax should be collected only on the basic price and the duty levied on the price should not form part of the sale price. According to the judgement of the High Court, Government have got right to collect sales-tax only on the basic price. The High Court has stated that duty levied does not form part of sale price and the Government should collect sales tax only on the basic price, not on the entire turnover, and duty does not form part of the total turnover. As a consequence, the Government will be asked to pay very heavy sum; they have to refund the amount to those persons who have paid the tax. Suppose the Government refunds money to the excise Contractors, that amount is not going to be given to the consumers. Therefore, the Government thought it fit to bring in this amendment to avoid the refund of tax to the contractors. If it was the intention of the Government to help the contractors, Government would not have brought this amendment. In the interest of the Government and to safeguard the revenues of the Government,' this amendment is brought before the Legislature.

Another point that was raised by my friends Sriyuths B. L. Narayanaswamy and H. N. Nanje Gowda was that by enhancing the tax, it is going to put up the price of arrack. It is not collected. It is not going to put up the price of the arrack. Only 6½ per cent of tax which was hitherto being collected is collected by raising the tax to 45 per cent on the basic price. Supposing the basic price is 55 paise. The duty levied is Rs. 3.68. So the sales tax now levied is on the basic price of 55 paise and 45 per cent of 55 paise is equal to 6½ per cent on Rs. 3.68, and it is not going to put up the price of the arrack.

SRI C. K. RAJAIAH SHETTY.—That statement is correct only as far as arrack is concerned. But, other things will be sold at a higher rate, such as country liquor other than toddy.

SRI M. RAJASEKHARA MURTHY.—Government has got the right under section 8 of the Sales Tax Act, to give relief in such cases. Therefore, hon. members need not be under the misapprehension that it is going to put up the cost price and the consumers will be affected.

With these few words, I request the hon. members to accept this Bill and pass it unanimously.

MR. SPEAKER.—The question is:

"That the Mysore Sales Tax (Second Amendment) Bill, 1969, be taken into consideration."

The motion was adopted.

CLAUSES 2 to 4.

Mr. SPEAKER.—The question is :

"That Clauses 2 to 4 both inclusive do stand part of the Bill."

The motion was adopted.

Clauses 2 to 4 both inclusive were added to the Bill.

CLAUSE 1, ETC.

Mr. SPEAKER.—There is a small amendment by the Hon. Minister to Clause 1.

Sri M. RAJASEKHARA MURTHY.—Sir, I beg to move :

" That in sub Clause (1) of Clause 1, the word 'second ' shall be omitted."

Mr. SPEAKER.—Amendment moved :

"That in sub clause (1) of Clause 1, the word ' second ' shall be omitted. "

Sri M. RAJASEKHARA MURTHY.—Sir, hon. Member Sri Nanje Gowda has already made it clear that when there are two Bills on the same Act, the first Bill shoud have been taken into consideration first and then the second Bill. Now we are taking the second Bill into consideration first and with a view to get over the technical difficulty, I have moved the amendment.

Sri K. H. PATIL.—Will it be a valid procedure ? When a Bill is pending before the House, would it not be possible for the Government to place all the relevant material after the commencement of the House ? As the Parliamentary Affairs Minister has rightly pointed out and the Hon. Speaker has accepted the proposition, will not that proposition be made clear here ? The Minister had admitted that he will take up the consideration of the first Bill later on and the second Bill now, which is an Ordinance in respect of some provision for which a Bill is pending before the House. Therefore, the ordinance, coupled with all the documents, could have been placed before us at the commencement of this Session, *i. e.*, on the 14th. Having not done so, I feel that it will not be legally correct to accept this.

The Hon. Minister stated that this Bill will become the First Amendment Bill and the other one will be the Second Amendment Bill. I am not against it. But so far as the other two Bills are concerned, he must move a motion asking the permission of this House to remove those Bills from the Register. Otherwise it will create confusion if he forgets to alter it as Second Amendment Bill. Later on, if they so desire, they may be reintroduced. So, I request the Hon. Minister to move for the removal of the first two Bills from the Register.

6-30 P.M.

Mr. SPEAKER.—I have understood the objections, Mr. Nanje Gowda should be happy that his suggestion has been accepted, So far as the other Bills are concerned, they will be considered by the House if and when they come up before it. When there are vigilant members here, I think the fear entertained by the Member is not justified. So, I think there is no force in the objection raised by the Member.

Sri K. H. PATIL.—Rule 70 (2) says:

> "Whenever an Ordinance, which embodies wholly or partly or with modification the provisions of a Bill pending before the Assembly, is promulgated a statement explaining the circumstances which necessitated immediate legislation by ordinance shall be laid on the Table at the commencement of the Session followlng the promulgation of the Ordinance."

The Hon. Minister has failed to place a statement explaining the circumstances which necessitated immediate legislation by Ordinance, at the commencement of the Session.

Mr. SPEAKER.—There is no Bill which is pending. The subject matter in all the three Bills is separate.

Sri K. H. PATIL.—Rule 70 enables me to take objection only to the second Bill which replaces the ordinance. For the first Bill, I am not in a position to take objection.

Mr. SPEAKER.—I will not prejudice the hon. member's right to take objection. He can take that objection. I will put the amendment to the vote.

The question is:

"That in sub clause (1) of clause 1, the word 'second' shall be omitted."

The motion was adopted.

Mr. SPEAKER.—The questiou is:

"That clause 1, as amended, do stand part of the Bill."

The motion was adopted.

CLAUSE 1 as amended, was added to the Bill.

Mr. SPEAKER. —The question is:

"That the long title and the Enacting formula do stand part of the Bill."

The motion was adopted.

The long title and the Enacting Formula were added to the Bill.

Motion to pass.

Sri M. RAJASEKHARA MURTHY.—I beg to move :

"That the Mysore Sales Tax (Second Amendment) Bill,1969, as amended be passed."

Mr. SPEAKER.—The question is :

"That the Mysore Sales Tax (Second Amendment) Bill, 1969, as amended, be passed."

The motion was adopted.

Mysore Agricultural Produce Marketing (Regulation) (Amendment) Bill, 1969

Motion to Consider

Mr. SPEAKER.—Next item on the agenda.

Sri H. N. NANJE GOUDA.—I rise to a point of order. My objection is about the next item in the agenda itself. The next item is consideration of the Mysore Agricultural Produce Marketing (Regulation) (Amendment) Bill, 1969. Sir, may I draw your kind attention to proviso to 73 (1) :

"Provided that no such motion shall be made until after copies of the Bill have been made available for the use of Members, and that except in cases of Appropriation Bills any member may object to any such motion being made unless copies of the Bill have been so made available for seven days, before the day on which the motion is made, and such objection shall prevail, unless the Speaker allows the motion to be made."

Now, this Bill is dated 16th August 1969 and was supplied to us on 18th August. That means, the Minister in charge of this Bill may move it for consideration on 26th August, *i.e.*, 7 days after it had been made available to Members.

Sri K. H. PATIL.—Let us not be so uncharitable as that. If they have got any difficulty, let them state those difficulties. Then we will consider the question of moving the consideration motion.

Sri H. N. NANJE GOUDA.—The Hon. Speaker is always anxious to safeguard the privileges of the Members, and he is interested in perfect legislation being passed by this House. I therefore request the Chair to allow my objection and direct the Hon. Minister to bring this motion only after 26th of this month and not earlier. I relied upon this Rule. I have got faith in the Chair. I have not looked into the the Bill even. I thought this Bill would come on the 26th. I think my privilege will be infringed if I am not given time. I cannot contribute my opinion till then in formulating a legislation. Therefore, I request the Chair to direct the Hon'ble Minister to bring it only on the 26th.